ಎಚ್. ಎಲ್. ನಾಗೇಗೌಡ

ಕೇಶವನ್ ಪ್ರಸಾದ್. ಕೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಎಚ್. ಎಲ್. ನಾಗೇಗೌಡ

ಕೇಶವನ್ ಪ್ರಸಾದ್. ಕೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

H. L. Nagegowda : By Keshawan Prasad K. Published by Dr. Karigowda Beechanahalli, Director, Prasaranga, Kannada University, Hampi, Vidyaranya, Kamalalpura-583 221. Pages : X + 30 Rs. 10/-

First Edition 1995

ನಮ್ಮವರು ಪುಸ್ತಕ ಮಾಲೆ ೧೧

ಪ್ರಕಾಶಕರು
ಡಾ. ಕರೀಗೌಡ ಬೀಚನಹಳ್ಳಿ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-೫೮೩ ೨೨೧.

ಬೆಲೆ : ಹತ್ತು ರೂಪಾಯಿಗಳು

ಮುದ್ರಕರು
ಮಾ ಪ್ರಿಂಟರ್ಸ್, ಬೆಂಗಳೂರು- ೭೯.
ದೂರವಾಣಿ : ೩೩೦೫೪೯೨ / ೩೩೮೭೧೨೮

ನಿಮ್ಮೊಡನೆ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೇ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ, ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗ್ಯತವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ. ಈ ಬಗೆಯ ಶಾಸ್ತ್ರ-ಕಲೆ, ಅಭಿಜಾತ-ಜಾನಪದ, ಮಾರ್ಗ-ದೇಸಿ,ಸ್ವಕೀಯ -ಪರಕೀಯ, ಪೌರ್ವಾತ್ಯ - ಪಾಶ್ಚಾತ್ಯ ಈ ಬಗೆ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿ ಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲದು. ಅನುವಾದ, ಭಾಷಾಂತರ, ವಿವರಣೆ, ಟೀಕೆ, ವಿಮರ್ಶೆ ಇಂಥ ವಿಧಾನಗಳನ್ನು ಅನುಸರಿಸುತ್ತ ತಿಳುವಳಿಕೆಯ ಹೊಸ ಸಾಹಿತ್ಯ ನಿರ್ಮಾಣವಾಗಬೇಕು. ಅಂಥ ಎಲ್ಲ ಬಗೆಯ ಸಂಶೋಧನಕ್ಕೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದೆ, ಅವಕಾಶವೂ ಇದೆ.

ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ವಿದ್ಯೆಯ ಸೃಷ್ಟಿಯಾಗುವುದು ಈ ಪ್ರಸಾರಾಂಗದಲ್ಲಿ. ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನೂ ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಾಡಿನ ಪ್ರಕೃತಿಯಂತೆ ನಾಡಿನ ಸಂಸ್ಕೃತಿ ಕೂಡ ಈ ಪರಿಪ್ರೇಕ್ಷ್ಯವಿಲ್ಲದೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಕಲ್ಲಿನಲ್ಲಿರುವ ಶಾಸನಗಳನ್ನು ಕಣ್ಣೆತ್ತಿ ನೋಡದ ಜನ ಅದೇ ಪುಸ್ತಕದಲ್ಲಿ ಪ್ರಕಟಗೊಂಡರೆ ಓದುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ. ಜನರಾಡುವ ಶಬ್ದಗಳನ್ನೇ ಕೋಶದಲ್ಲಿ ಸಂಗ್ರಹಿಸಿದರೆ ಆ ಶಬ್ದಗಳಿಗೆ ತಿಳುವಳಿಕೆಯ ಬೆಲೆ ಬರುತ್ತದೆ.

ನಮ್ಮ ಪ್ರಸಾರಾಂಗ, ಈಗಾಗಲೇ ಕೆಲವು ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಸಾರಾಂಗ, ತನ್ನ ಪ್ರಕಟಣೆಗಳ ಮೂಲಕ ಸಾರ್ಥಕವಾಗಬೇಕಾದ ದಾರಿಯನ್ನು ಹುಡುಕಿಕೊಳ್ಳುತ್ತಿದೆ. ಲೋಕದಲ್ಲಿಯ ತಿಳುವಳಿಕೆಯನ್ನು ಸಂಗ್ರಹಿಸಿ ತಿರುಗಿ ಲೋಕಕ್ಕೇ ದಾನ ಮಾಡುವ ಪ್ರಕ್ರಿಯೆ ಪ್ರಸಾರಾಂಗದಲ್ಲಿ ನಡೆಯುತ್ತಿದೆ. ಸಂಗ್ರಹವಾದ ತಿಳುವಳಿಕೆಗೆ ಗ್ರಂಥಗಳ ರೂಪವನ್ನು ಕೊಡುವ ಹೊಣೆಗಾರಿಕೆ ಪ್ರಸಾರಾಂಗದ್ದಾಗಿದೆ. ಈ ರೂಪಾಂತರದ ಪ್ರಕ್ರಿಯೆ ನಮ್ಮ ವಿಶ್ವವಿದ್ಯಾಲಯದ ವೈಶಿಷ್ಟ್ಯವಾಗಿದೆ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು, ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪವೆಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಿರುಪುಸ್ತಿಕೆಗಳ ರೂಪದಲ್ಲಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪರಿವಿಡಿ

ಎಚ್. ಎಲ್. ನಾಗೇಗೌಡ

ಎಚ್.ಎಲ್. ನಾಗೇಗೌಡ

ಎಚ್. ಎಲ್. ನಾಗೇಗೌಡರ ಊರು ಹೆರಗನಹಳ್ಳಿ. ಮಂಡ್ಯ ಮತ್ತು ಹಾಸನ ಜಿಲ್ಲೆಗಳು ಸೇರುವ ಗಡಿಗೆ ಹೊಂದಿದಂತೆ ಸುಪ್ರಸಿದ್ಧ ಶ್ರೀ ಕಾವೇಟಿರಂಗನ ಪಧ್ಧತಲ್ಪದಲ್ಲಿದೆ. ಹೆರಗನಹಳ್ಳಿ ತೆಂಗಿನಕಾಯಿ ವ್ಯಾಪಾರಕ್ಕೆ ಹೆಸರು ಗಳಿಸಿದೆ.

ಹೆರಗನಹಳ್ಳಿಯಲ್ಲೇ ಎಚ್.ಎಲ್. ನಾಗೇಗೌಡರ ಮನೆತನ ಬಹಳ ದೊಡ್ಡದಾಗಿತ್ತು. ಇವರ ಮನೆಯನ್ನು 'ದೊಡ್ಡಮನೆ' ಎಂಬುದಾಗಿಯೆ ಕರೆಯುತ್ತಿದ್ದರು. ದೊಡ್ಡಮನೆಯಲ್ಲಿ ಹೆಸರಿಗೆ ತಕ್ಕಂತೆ ಹೆಚ್ಚು ಜನರು ಇದ್ದರು. ನಾಗೇಗೌಡರ ತಂದೆ ಶ್ರೀ ಲಿಂಗೇಗೌಡರು ಆ ಮನೆಯ ಹಿರಿಯ ಮಗ. ವ್ಯವಸಾಯದ ಜೊತೆಯಲ್ಲಿ ಅಬ್ಕಾರಿ ಗುತ್ತಿಗೆದಾರರಾಗಿಯೂ ಕೆಲಸ ಮಾಡುತ್ತಿದ್ದರು.

ಎಚ್.ಎಲ್. ನಾಗೇಗೌಡರು ತಮ್ಮ ತಾಯಿಯ ತೌರೂರು ನಾಗತಿಹಳ್ಳಿಯಲ್ಲಿ ೧೯೧೫ ಫೆಬ್ರವರಿ ೧೧ ರಂದು ಹುಟ್ಟಿದರು. ಹುಟ್ಟಿದ ಮೂರು ವರ್ಷಕ್ಕೆ ಹೆತ್ತ ತಾಯಿಗೆ ಸಾಂಕ್ರಾಮಿಕ ಜ್ವರ (ಇನ್‌ಫ್ಲೂಯೆಂಜಾ) ಬಂದು ಸತ್ತು ಹೋದರು. ಕಾರಣ ತಾಯಿಯ ಪ್ರೀತಿಯಿಂದ ವಂಚಿತರಾದರು. ಮುಂದೆ ಅಜ್ಜಿಯ (ತಂದೆಯ ತಾಯಿ) ಆರೈಕೆಯಲ್ಲಿ ಬೆಳೆದರು. ಬಾಲ್ಯದಲ್ಲಿ ಒಮ್ಮೆ ಸಿಡುಬು ರೋಗಕ್ಕೆ ತುತ್ತಾಗಿ ಬದುಕಿ ಉಳಿದರು.

ತಮ್ಮ ಆರನೆಯ ವಯಸ್ಸಿಗೆ ವಿದ್ಯಾಭ್ಯಾಸವನ್ನು ಆರಂಭಿಸಿದರು. ಆಗ ಮನೆಯ ಜಗುಲಿ ಅಥವಾ ಚಾವಡಿಯಲ್ಲಿ ಕೂಲಿಮಠ ನಡೆಯುತ್ತಿದ್ದವು. ಈಗಿನ ದಿನಗಳಂತೆ ಸ್ಲೇಟು ಬಳಪ ಇದ್ದಿರಲಿಲ್ಲ. ಹುಡುಗರ ಮುಂದೆ ಮರಳನ್ನು ಹರಡಿದರೆ ಅದೇ ಸ್ಲೇಟು. ಬೇಲಿಗಳಲ್ಲಿ ಬೆಳೆಯುತ್ತಿದ್ದ ಗಜ್ಜುಗ ತಂದು ಅದನ್ನು ಅರ್ಧಕ್ಕೆ ಕೊಯ್ದು, ಅಕ್ಷರ ತಿದ್ದುವ ಬೆರಳಿಗೆ ಹಾಕಿಕೊಂಡು ಮರಳಿನ ಮೇಲೆ ಅಕ್ಷರಗಳನ್ನು ತಿದ್ದುವುದರ ಮೂಲಕ ವಿದ್ಯಾಭ್ಯಾಸ ಪ್ರಾರಂಭಗೊಂಡು ಪಾಠಗಳನ್ನು ಹಾಗೂ ನೂರರವರೆಗೂ ಮಗ್ಗಿ ಗಟ್ಟಿ(ಕಂಠಪಾಠ) ಮಾಡಬೇಕಾಗಿತ್ತು.

ಕೂಲಿಮಠ ಮುಗಿದ ಮೇಲೆ ಪಕ್ಕದ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಗೆ ಸೇರಿದರು. ಅಲ್ಲಿ ಅಕ್ಷರ ಕಲಿಯಲು ಸ್ಲೇಟು, ಬಳಪ ಮತ್ತು ಪುಸ್ತಕಗಳಿದ್ದುವು. ರಾತ್ರಿ ಮನೆಪಾಠವನ್ನು ಓದುವುದು ಕಡ್ಡಾಯ. ಪ್ರತಿ ಶುಕ್ರವಾರ ಸರಸ್ವತಿ ಪೂಜೆ ನಡೆಯುತ್ತಿತ್ತು. ಒಬ್ಬೊಬ್ಬರು ಒಂದೊಂದು ವಾರ ತೆಂಗಿನಕಾಯಿ ತೆಗೆದುಕೊಂಡು ಹೋಗುವುದು ವಾಡಿಕೆಯಾಗಿತ್ತು. ಹೆಚ್ಚಿನ ಹುಡುಗರ ಓದು ಇಲ್ಲಿಗೆ ಮುಗಿಯುತ್ತಿತ್ತು. ಏಕೆಂದರೆ ಮುಂದಿನ ಓದಿಗೆ ಪಕ್ಕದ

ಹಳ್ಳಿಗೆ ಹೋಗಬೇಕಿತ್ತು. ಆದರೆ ನಾಗೇಗೌಡರ ತಂದೆಗೆ ತನ್ನ ಮಗ ಲೋಯರ್ ಸೆಕೆಂಡರಿಯನ್ನಾದರೂ ಮಾಡಬೇಕೆಂಬ ಆಸೆ. ಆದ್ದರಿಂದ ಪಕ್ಕದ ಹಳ್ಳಿಯಲ್ಲಿ ನೆಂಟರೊಬ್ಬರ ಮನೆಯಲ್ಲಿ ಉಳಿದುಕೊಂಡು ವಿದ್ಯಾಭ್ಯಾಸ ಮುಂದುವರಿಸಿದರು. ಪರೀಕ್ಷೆ ಕಟ್ಟಲು ಮೂವತ್ತು ಮೈಲಿ ದೂರದ ಕಣಗಲಿಗೆ ಹೋಗಬೇಕಿತ್ತು. ಆಗ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡಿ ಕಣಗಲಿನಲ್ಲಿ ಪರೀಕ್ಷೆ ಬರೆದು ಬಂದಾಗ ನಾಗೇಗೌಡರ ತಂದೆಯವರು ಹಳ್ಳಿಯಲ್ಲೆಲ್ಲಾ ಸುದ್ದಿ ಮಾಡಿದರು.

ಕನ್ನಡ ಲೋಯರ್ ಪರೀಕ್ಷೆಯು ತೇರ್ಗಡೆಯಾಯಿತು. ಆಗಂತು 'ನನ್ನ ಮಗನ್ನ ಶೇಕ್‌ದಾರ್‌ಗಿಂತಲೂ ದೊಡ್ಡ ಹುದ್ದೆಯಾದ (ಆಗಿನ ಕಾಲಕ್ಕೆ) ಅಮಲ್ದಾರ್ನ ಮಾಡ್ತೀನಿ' ಎಂದು ನಾಡಿಗೆಲ್ಲಾ ಸಾರಿಕೊಂಡು ಬಂದು ಬಹಳ ಸಂತೋಷಪಟ್ಟರು. ಆದರೆ ಮುಂದೆ ಓದುವುದೆಲ್ಲಿ ಎಂಬ ಪ್ರಶ್ನೆ ಬಂತು. ಹತ್ತಿರದ ಬೆಳ್ಳೂರಿನಲ್ಲಿ ಮಿಡ್ಲ್‌ಸ್ಕೂಲು ಇದ್ದರೂ ಊಟಕ್ಕೆ ಸೌಕರ್ಯವಿಲ್ಲ. ಆದ್ದರಿಂದ ಹೆರಗನಹಳ್ಳಿಯಿಂದ ಸುಮಾರು ಇಪ್ಪತ್ತು ಮೈಲಿ ದೂರದಲ್ಲಿರುವ ಚನ್ನರಾಯಪಟ್ಟಣದ, ಹತ್ತಿರದ ನೆಂಟರ ಮನೆಯಲ್ಲಿ ಉಳಿದುಕೊಂಡು ಇಂಗ್ಲಿಷ್ ಲೋಯರ್ ಸೆಕೆಂಡರಿಯನ್ನು ಪಾಸು ಮಾಡಿದರು.

೧೯೩೦ರಲ್ಲಿ ಇಂಗ್ಲಿಷ್ ಲೋಯರ್ ಸೆಕೆಂಡರಿ ಪಾಸಾದ ಬಳಿಕ ಮತ್ತೊಮ್ಮೆ ಮುಂದೆಲ್ಲಿಗೆ ಎಂಬ ಸಮಸ್ಯೆ ಎದುರಾಯಿತು. ಚನ್ನರಾಯಪಟ್ಟಣದಲ್ಲಿ ಹೈಸ್ಕೂಲು ಇರಲಿಲ್ಲ. ಆಗ ಹೆರಗನಹಳ್ಳಿಗೆ ಹತ್ತಿರದಲ್ಲಿದ್ದ ಹೈಸ್ಕೂಲುಗಳೆಂದರೆ; ಹಾಸನ, ತಿಪಟೂರು, ಬೆಂಗಳೂರು, ಮೈಸೂರು ಮತ್ತು ಚನ್ನಪಟ್ಟಣಗಳಲ್ಲಿ ಮಾತ್ರ. ನಾಗೇಗೌಡರನ್ನು ಸಾಕಿದ ದೊಡ್ಡಮ್ಮನ ಹಿರಿಯ ಮಗ ಚನ್ನಪಟ್ಟಣದಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಬೆಂಗಳೂರಿಗೆ ಎಲ್.ಎಂ.ಪಿ. ಓದುತ್ತಿದ್ದರು. ಆದಕಾರಣ ನಾಗೇಗೌಡರು ಚನ್ನಪಟ್ಟಣದ ಹೈಸ್ಕೂಲು ಸೇರಿಕೊಂಡರು. ಆಗರ್ಭ ಶ್ರೀಮಂತರೂ ಧೀಮಂತ ವ್ಯಕ್ತಿಯೂ ಆಗಿದ್ದ ತಿಟ್ಟಮಾರ್ನಹಳ್ಳಿ ವೆಂಕಟಪ್ಪನವರು ಮೇಲ್ವಿಚಾರಕರಾಗಿದ್ದ ಒಕ್ಕಲಿಗರ ಹಾಸ್ಟೆಲ್ಲಿನಲ್ಲಿ ಉಳಿದುಕೊಂಡು ೧೯೩೩ರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದರು.

೧೯೩೩ರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಮೇಲೆ ನಾಗೇಗೌಡರನ್ನು ಅವರ ತಂದೆಯವರು ಬೆಂಗಳೂರಿಗೆ ಕರೆದುಕೊಂಡು ಹೋದರು. ಅಲ್ಲಿಯು ಒಕ್ಕಲಿಗರ ಹಾಸ್ಟೆಲಿಗೆ ಸೇರಿಕೊಂಡು ಇಂಟರ್ ಮೀಡಿಯಟ್ ಕಾಲೇಜಿಗೆ ಹೋಗಿ ಬರುತ್ತಿದ್ದರು. ಆಗ ವಿಶ್ವೇಶ್ವರಪುರದಲ್ಲಿದ್ದ ರಾಮಕೃಷ್ಣಾಶ್ರಮಕ್ಕೆ ತಪ್ಪದೆ ಹೋಗುವುದನ್ನು ರೂಢಿಸಿಕೊಂಡಿದ್ದರು. ಬೆಂಗಳೂರಿಗೆ ಬಂದ ಪ್ರಸಿದ್ಧ ವಾಗ್ಮಿಗಳ ಭಾಷಣಗಳನ್ನೆಲ್ಲಾ ತಪ್ಪದೆ ಕೇಳುವುದು ನಾಗೇಗೌಡರಿಗೆ ಬಹಳ ಅಚ್ಚುಮೆಚ್ಚು. ಅಂಥವರಲ್ಲಿ ಸರೋಜಿನೀನಾಯ್ಡು, ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ ಹಾಗೂ ಗಾಂಧೀಜಿ ಪ್ರಮುಖರು. ಒಮ್ಮೆ ಬಿಹಾರಿನಲ್ಲಿ ಭಾರಿ ಭೂಕಂಪವಾಯಿತು. ಅದರ ಪರಿಣಾಮ ಸಾವಿರಾರು ಜನರು ಮರಣ

ಹೊಂದಿದರು. ಪರಿಹಾರ ನಿಧಿಗೆ ಹಾಸ್ಟೆಲ್‌ನಿಂದ ೧೪೪ ರೂಪಾಯಿ ೮ ಆಣೆ ಸಂಗ್ರಹಿಸಿ ಬಾಬು ರಾಜೇಂದ್ರಪ್ರಸಾದರಿಗೆ ಕಳುಹಿಸಿಕೊಟ್ಟಿದ್ದರು.

ಇಂಟರ್ ಮೀಡಿಯಟ್ ಓದುವಾಗ ನಾಗೇಗೌಡ ಅವರಿಗೆ ಬಿ.ಎಂ.ಶ್ರೀ. ಇಂಗ್ಲಿಷ್ ಅಧ್ಯಾಪಕರು, ವೀ.ಸೀ.ಯವರು ಕನ್ನಡ ಮೇಷ್ಟ್ರು ಮತ್ತು ಸಿ. ರಂಗಾಚಾರ್ ಎಂಬ ಸಂಸ್ಕೃತ ಮೇಷ್ಟ್ರು ಹಿಂದಿಯನ್ನು ಹೊರಗಡೆ ಕಲಿಸುತ್ತಿದ್ದರು. ಆಗ ಎಲ್ಲೆಲ್ಲೂ ಹಿಂದಿ ಕಲಿಯಬೇಕೆಂಬ ಚಳುವಳಿಯೇ ನಡೆದಿತ್ತು. ಆಗ ಹಿಂದಿಯನ್ನು ಕಲಿತು 'ಪ್ರಥಮ' ಮತ್ತು 'ಪ್ರವೇಶ' ಪರೀಕ್ಷೆಗಳನ್ನು ಒಂದೇ ವರ್ಷದಲ್ಲಿ ಪಾಸು ಮಾಡಿದರು.

ಇಂಟರ್ ಮೀಡಿಯಟ್ ಪಾಸಾದ ಮೇಲೆ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಬಹುದಿತ್ತು. ಆದರೆ, ಅಷ್ಟರಲ್ಲಿ ನಾಗೇಗೌಡರ ತಂದೆಗೆ ಮಗನನ್ನು ಲಾಯರು ಮಾಡಬೇಕೆಂಬ ಆಸೆ ಹುಟ್ಟಿಕೊಂಡಿತ್ತು. ಕಾರಣ ಅಂದು ಲಾಯರುಗಳಿಗೆ ದೊರೆಯುತ್ತಿದ್ದ ಫೀಜು, ಸುಖಜೀವನ ಮತ್ತು ದೊಡ್ಡ ದೊಡ್ಡ ಮುಖಂಡರುಗಳು ಲಾಯರೇ ಆಗಿದ್ದುದು. ಸೆಂಟ್ರಲ್ ಕಾಲೇಜಿನಲ್ಲಿ ಆರ್ಟ್ಸ್ ವಿಷಯಗಳು ಇದ್ದಿರಲಿಲ್ಲ. ಆದಕಾರಣ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎಸ್ಸಿಗೆ ಸೇರಿದರು. ವಿಷಯಗಳು ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಗಣಿತಶಾಸ್ತ್ರ. ವಿ.ಎಲ್. ಡಿಸೌಜಾ ಅರ್ಥಶಾಸ್ತ್ರ ಪ್ರಾಧ್ಯಾಪಕರು, ಎ.ಆರ್. ವಾಡಿಯಾ ಸಮಾಜಶಾಸ್ತ್ರ ಪ್ರಾಧ್ಯಾಪಕರು, ಕೆ.ಬಿ. ಮಾಧವ ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಮತ್ತು ಟಿ.ಎಸ್. ವೆಂಕಣ್ಣಯ್ಯ ಕನ್ನಡ ಪ್ರಾಧ್ಯಾಪಕರಾದರೆ ಎ.ಆರ್. ಕೃಷ್ಣಶಾಸ್ತ್ರಿ, ತೀ.ನಂ. ಶ್ರೀಕಂಠಯ್ಯ ಮತ್ತು ಡಿ.ಎಲ್. ನರಸಿಂಹಾಚಾರ್ ಕನ್ನಡ ಅಧ್ಯಾಪಕರಾಗಿದ್ದರು.

ಮೈಸೂರಿನಲ್ಲಿ ಓದುವಾಗಲೂ ನಾಗೇಗೌಡರು ಒಕ್ಕಲಿಗರ ಹಾಸ್ಟೆಲ್‌ನಲ್ಲಿದ್ದರು. ಹೆಚ್.ಸಿ. ದಾಸಪ್ಪ ಅವರು ಹಾಸ್ಟೆಲಿನ ಮೇಲ್ವಿಚಾರಕರಾಗಿದ್ದರು. ವಿದ್ಯಾರ್ಥಿಗಳ ಯೋಗ ಕ್ಷೇಮವನ್ನು ವಿಚಾರಿಸಿಕೊಳ್ಳುವುದೇ ಅಲ್ಲದೆ ಊಟೋಪಚಾರದ ವ್ಯವಸ್ಥೆಯು ಉತ್ತಮವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಮೈಸೂರಿಗೆ ಬಂದ ನಾಗೇಗೌಡರಿಗೆ ಪುಸ್ತಕ ಓದುವ ಹವ್ಯಾಸ ಬೆಳೆಯಿತು. ಆಗ ಹೊಸ ಪುಸ್ತಕಗಳನ್ನು ಕೊಂಡು ಓದಲು ಸಾಧ್ಯವಾಗದೆ ಹಳೆಯ ಪುಸ್ತಕಗಳನ್ನು ಕೊಂಡು ಓದುತ್ತಿದ್ದರು ಮತ್ತು ಸ್ವಂತವಾಗಿ ಪುಟ್ಟದೊಂದು ಪುಸ್ತಕ ಭಂಡಾರ ಮಾಡಿಕೊಂಡಿದ್ದರು. ಆಗಿನಿಂದಲೇ 'ಪ್ರಬುದ್ಧ ಕರ್ನಾಟಕ'ಕ್ಕೆ ಚಂದಾದಾರರಾಗಿ ಬರವಣಿಗೆಯನ್ನು ಮಾಡುವತ್ತ ಮನಸ್ಸು ವಾಲಿತು. ಟಿ. ಕೃಷ್ಣಮೂರ್ತಿ ಎಂಬ ಗಣಿತಶಾಸ್ತ್ರ ಅಧ್ಯಾಪಕರು ಒಂದು ಬಗೆಯ ನಿರಾಡಂಬರ ವ್ಯಕ್ತಿ. ಖಾದಿ ಧರಿಸಿದ ಅವರು ಗ್ರಾಮೀಣರ ಬಗ್ಗೆ ಆಸಕ್ತಿ ವಹಿಸುತ್ತಿದ್ದರು. ಅವರಿಗಾಗಿ ಹಳೆಯ ಚಿತ್ರಗಳನ್ನು ಬರೆಯತೊಡಗಿದ ನಾಗೇಗೌಡರು 'ನಾಲ್ಕುನೂರು' ಲೇಖನಗಳನ್ನು ಬರೆಯಬೇಕೆಂಬ ಹಂಬಲ ಹೊಂದಿದ್ದು ಅದು ಸಾಧ್ಯವಾಗಿರಲಿಲ್ಲ. ಮುಂದೆ ಈ ಲೇಖನಗಳ ಸಂಗ್ರಹವೆ 'ನನ್ನೂರು' ಕಾದಂಬರಿ ಆಯಿತು.

ಮಿಡ್ಲ್‌ಸ್ಕೂಲ್ ಸೇರಿದ ದಿನದಿಂದಲೂ ಸ್ಕಾಲರ್‌ಷಿಪ್ ಇಲ್ಲವೆ ಫ್ರೀಷಿಪ್ ಬರುತ್ತಿತ್ತು. ದೊಡ್ಡಮನೆ ಸಂಸಾರ ಸಾಗಿಸಲು ಪರದಾಡುತ್ತಿದ್ದ ತಮ್ಮ ತಂದೆಯವರ ಪರಿಸ್ಥಿತಿಯನ್ನು ಅರಿತುಕೊಂಡು ಶ್ರಮವಹಿಸಿ ಓದಿ ಬಿ.ಎಸ್ಸಿ ಪಾಸುಮಾಡಿದರು. ೧೯೩೦ರಲ್ಲಿ ಬಿ.ಎಸ್ಸಿ ಪಾಸುಮಾಡಿದ ನಾಗೇಗೌಡರನ್ನು ಹಳ್ಳಿಯಲ್ಲಿ ಬಹಳವಾಗಿ ಗೌರವಿಸಿದರು. ಇಡೀ ನಾಗಮಂಗಲ ತಾಲ್ಲೂಕಿನ ಒಕ್ಕಲಿಗರಲ್ಲಿ ಗ್ರಾಜುಯೇಟ್ ಪದವಿ ಪಡೆದವರಲ್ಲಿ ಇವರು ಎರಡನೆಯವರಾಗಿದ್ದರು. ಈ ಸುದ್ದಿಯೂ ಪತ್ರಿಕೆಯಲ್ಲಿ ಬಂದಿತ್ತು.

ಬಿ.ಎಸ್ಸಿ. ಪದವಿ ಪಡೆದರೂ ಪ್ರೊಬೇಷನರ್ ಕೆಲಸ ದೊರೆಯುವ ಸಾಧ್ಯತೆ ಇಲ್ಲದಾಗ ಎಲ್.ಎಲ್.ಬಿ. ಓದಲು ಪೂನಾಕ್ಕೆ ಹೋದರು. ಆಗ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ಲಾ ಕಾಲೇಜು ಇದ್ದಿರಲಿಲ್ಲ.

ಆಗ ನಾಗೇಗೌಡರಿಗೆ ಇಪ್ಪತ್ತೆರಡರ ಪ್ರಾಯ. ಯಾವುದೇ ತಾಪತ್ರಯವಿಲ್ಲದ ಸುಖಜೀವನ. ಪುಣೆಯ ಪ್ರಕೃತಿ ಸೌಂದರ್ಯ ಇವರನ್ನು ಕವಿಯನ್ನಾಗಿ ಮಾಡಿತು. 'ನಾನಾಗುವೆ ಗೀಜಗನಹಕ್ಕಿ' ಎಂಬ ಕವನ ಸಂಗ್ರಹದಲ್ಲಿ ಬರುವ ಬಹುಪಾಲು ಕವಿತೆಗಳು ಪುಣೆಯಲ್ಲಿದ್ದಾಗ ಬರೆದವುಗಳಾಗಿವೆ.

ಎರಡು ಪದವಿಗಳನ್ನು ಪಡೆದಿದ್ದರೂ ಮುಂದೇನು ಮಾಡುವುದು ಎಂಬ ಚಿಂತೆ. ತಂದೆಯವರಿಗೆ ಲಾಯರ್ ಮಾಡಬೇಕು ಎಂಬ ಆಸೆ. ಆದರೆ ನಾಗೇಗೌಡರಿಗೆ ಇಷ್ಟವಿಲ್ಲ. ತಂದೆಯ ಒತ್ತಾಯಕ್ಕೆ ಬೆಂಗಳೂರಿಗೆ ಹೋಗಿ ಲಾಯರ್ ಹೆಚ್.ಸಿ. ದಾಸಪ್ಪನವರನ್ನು ಕಂಡು ಬಂದರು. ಕಡೆಗೂ ಯಾವುದಾದರೂ ಕೆಲಸಕ್ಕೆ ಸೇರಬೇಕು ಎಂದು ತೀರ್ಮಾನಿಸಿದ ನಾಗೇಗೌಡರು ಸಿ.ಆರ್.ಬಿ. (Central Recruitment Board)ಗೆ ಅರ್ಜಿ ಹಾಕಿದರು. ಆರ್ಡರು ಕೂಡಲೇ ಬಂತು. ಮುನ್ಸೀಫ್ ಕೋರ್ಟು ಹೆಡ್ ಮುನ್ಸಿ ಕೆಲಸ. ತರೀಕೆರೆ ತಾಲ್ಲೂಕಿನ ನರಸಿಂಹರಾಜಪುರದಲ್ಲಿ ಮೊದಲಿಗೆ ಸರ್ಕಾರಿ ನೌಕರಿಗೆ ಸೇರಿದರು.

ನರಸಿಂಹರಾಜಪುರದಲ್ಲಿ ಯಾರ ಮನೆಯಲ್ಲಿ ಬಾಡಿಗೆಗೆ ಉಳಿದುಕೊಂಡಿದ್ದರೋ ಆ ಮನೆಯವರ ತಂಗಿಯನ್ನೆ ಮದುವೆಯಾದರು. ಕೆಲವೇ ತಿಂಗಳುಗಳಲ್ಲಿ ಚಿಕ್ಕಮಗಳೂರಿಗೆ ವರ್ಗವಾಯಿತು. ಅಲ್ಲಿ ಹೋಗಿ ಕೆಲಸಕ್ಕೆ ಸೇರಿಕೊಂಡ ಬಳಿಕ ಎಂ.ಸಿ.ಎಸ್. (ಈಗಿನ ಕೆ.ಎ.ಎಸ್‌ಗೆ ಸಮಾನ) ಪರೀಕ್ಷೆಗೆ ಕುಳಿತುಕೊಂಡರು. ಅವರ ಸಂಖ್ಯೆ ಕೇವಲ ೪೩ ಮಾತ್ರ. ಅವರಲ್ಲಿ ಹಳ್ಳಿಯವನು ಒಬ್ಬನೇ ಒಬ್ಬ. ಅವರೇ ನಾಗೇಗೌಡರು! ಮೊದಲ ಪಟ್ಟಿಯಲ್ಲಿ ಬಂದ ಫಲಿತಾಂಶದಲ್ಲಿ ೨೫ನೇ ರ್‍ಯಾಂಕ್ ಪಡೆದಿದ್ದರು. ಮೊದಲ ಒಬ್ಬರನ್ನೋ ಅಥವಾ ಇಬ್ಬರನ್ನೋ ಅಸಿಸ್ಟೆಂಟ್ ಕಮೀಷನರುಗಳಾಗಿ ತೆಗೆದುಕೊಳ್ಳುತ್ತಿದ್ದರು. ಹೀಗಾಗಿ ಅಲ್ಲಿ ಅವಕಾಶ ಸಿಗಲಿಲ್ಲ. ಆಗ ಇದ್ದ ಒಂದು ನಿಯಮವೆಂದರೆ ಪರೀಕ್ಷೆಗೆ ಕುಳಿತ ಅಥವಾ ಕುಳಿತುಕೊಳ್ಳುವ ಒಬ್ಬಿಬ್ಬರನ್ನು ಅಸಿಸ್ಟೆಂಟ್ ಕಮಿಷನರುಗಳಾಗಿ ಮಾಡುತ್ತಿದ್ದರು. ಆ ಅವಕಾಶಕ್ಕಾಗಿ ನಾಗೇಗೌಡರು ಪ್ರಯತ್ನಪಟ್ಟರು. ಮಹಾರಾಜರಾಗಿದ್ದ ಜಯಚಾಮರಾಜ

ಒಡೆಯರಿಗೆ ಮನವಿಯನ್ನೂ ಕಳುಹಿಸಿಕೊಟ್ಟರು. ಅದರ ಪರಿಣಾಮವಾಗಿ ಚೀಫ್ ಸೆಕ್ರೆಟರಿಯಿಂದ ಪತ್ರ ಬಂತು. ಅದರಲ್ಲಿ ದಿವಾನರನ್ನು ಭೇಟಿ ಮಾಡಬೇಕೆಂದು ದಿನಾಂಕ ಮತ್ತು ಸಮಯ ತಿಳಿಸಲಾಗಿತ್ತು. ಅದೇ ಪ್ರಕಾರವಾಗಿ ನಾಗೇಗೌಡರು ದಿವಾನರನ್ನು ಭೇಟಿ ಮಾಡುವ ಸಲುವಾಗಿ ಬಹಳ ಭಯದಿಂದಲೇ ಒಳ ಹೋದಾಗ ಅವರು ಎದ್ದು ನಿಂತು ಆಹ್ವಾನಿಸಿದರು. ಅಷ್ಟರಲ್ಲಿ ನಾಗೇಗೌಡರ ಬಾಯಿ ಒಣಗಿ ಏನು ಹೇಳಲು ಆಗಲಿಲ್ಲ. Very good! We will do something for you' ಎಂದು ಕೈ ಕುಲುಕಿ ಕಳುಹಿಸಿಕೊಟ್ಟರು.

ಅನಂತರ ಚೀಫ್ ಸೆಕ್ರೆಟರಿ, ಜನರಲ್ ಸೆಕ್ರೆಟರಿ ಅವರನ್ನೆಲ್ಲಾ ಭೇಟಿ ಮಾಡಿ ಜೊತೆಗೆ ಒಕ್ಕಲಿಗರ ಸಂಘದ ಅಧ್ಯಕ್ಷರೂ ಅಡ್ವೊಕೇಟ್ ಜನರಲ್‌ರೂ ಆಗಿದ್ದ ಲಕ್ಷ್ಮಣಗೌಡರು ಮುಂತಾದವರನ್ನು ಕಂಡು ಚಿಕ್ಕಮಗಳೂರಿಗೆ ಹಿಂದಿರುಗಿ ಹೆಡ್‌ಮುನ್ಷಿ ಕೆಲಸದಲ್ಲಿ ತೊಡಗಿದರು. ಒಂದು ದಿನ ಸರ್ಕಾರದಿಂದ ಲಕೋಟೆ ಬಂದಿತು. ಅದರ ಪ್ರಕಾರ ಗೌಡರು ರೆವಿನ್ಯೂ ಪ್ರೊಬೇಷನರ್ ಆಗಿ ಆಯ್ಕೆಯಾಗಿದ್ದರು.

೧೯೪೧ರಲ್ಲಿ ಗೆಜೆಟೆಡ್ ಹುದ್ದೆ ದೊರೆಯುವುದರೊಂದಿಗೆ ಅವರ ಹೊಸಬಾಳು ಆರಂಭವಾಯಿತು.

ವಿವಿಧ ಇಲಾಖೆಗಳಲ್ಲಿ ವಿವಿಧ ಬಗೆಯ ತರಬೇತಿ ಎರಡು ವರ್ಷ ಸಾಗಿತು. ಬೆಂಗಳೂರು, ಮಂಡ್ಯ, ಮೈಸೂರು, ಟೀ.ನರಸೀಪುರ, ಪಾಂಡವಪುರ, ಮಂಡ್ಯ ವಿ.ಸಿ. ಫಾರಂಗಳಲ್ಲಿ ಕೆಲಸ ಮಾಡಿದರು. ಈ ಎರಡು ವರ್ಷಗಳ ತರಬೇತಿಯ ಅನಂತರ ಬಹಳ ನಿಷ್ಠೆಯಿಂದ ಕೆಲಸ ಮಾಡಿದರು. ಅನಂತರ ಹರಿಹರಕ್ಕೆ ಅಮಲ್ದಾರರಾಗಿ ಹೋದರು(೧೯೪೩). ಅಲ್ಲಿಗೆ ಹೋದ ಹತ್ತು ದಿನಗಳಲ್ಲಿ ಸಂಕಲೀಪುರ ಎಂಬ ಗ್ರಾಮದಲ್ಲಿ ಎಪ್ಪತ್ತು ಮನೆಗಳು ಬೆಂಕಿಗೆ ಆಹುತಿಯಾಗಿದ್ದವು. ಹದಿನೆಂಟು ಮೈಲಿ ದೂರವನ್ನು ಸೈಕಲ್ಲಿನಲ್ಲಿ ಎರಡೇ ಗಂಟೆಗಳಲ್ಲಿ ಕ್ರಮಿಸಿ ನೊಂದ ಜನರಿಗೆ ಸಾಂತ್ವನ ಹೇಳಿ, ಹರಿಹರ-ದಾವಣಗೆರೆ ವರ್ತಕರನ್ನು ಮತ್ತು ಹಲವಾರು ಮಂದಿ ಅನುಕೂಲಸ್ಥರನ್ನು ಕಂಡು, ಹಣ, ದವಸಧಾನ್ಯ ಹಂಚು ಬಿದಿರುಗಳು ಹೀಗೆ ಬೇಕಾದ ಎಲ್ಲವನ್ನು ದಾನವಾಗಿ ಪಡೆದು ನತದೃಷ್ಟರಿಗೆ ಹಂಚಿಸಿದರು. ಇದರಿಂದ ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲ ನಾಗೇಗೌಡರ ಬಗ್ಗೆ ಗೌರವ ಭಾವನೆ ಮೂಡಿತು.

ಚಿತ್ರದುರ್ಗದ ಜಿಲ್ಲಾಧಿಕಾರಿಯವರು ಅಧಿಕಾರಿಗಳ ಸಭೆಯನ್ನು ಕರೆದಿದ್ದರು. ಆಗ ತಂದೆಗೆ ಪ್ಲೇಗ್ ತಗುಲಿರುವ ತಂತಿ ಸಂದೇಶ ಬಂತು. ಆದರೆ ಇವರು ಊರು ಸೇರುವಷ್ಟರಲ್ಲಿ ತಂದೆಯವರು ಕೊನೆಯುಸಿರೆಳೆದಿದ್ದರು (೧೯೪೭). ನಾಗೇಗೌಡರಿಗೆ ೧೯೪೭ರಲ್ಲಿಯೇ ಅಸಿಸ್ಟೆಂಟ್ ಕಮೀಷನರಾಗಿ ಬಡ್ತಿ ದೊರೆಯಿತು.

ನಾಗೇಗೌಡರು ತಮ್ಮ ನಲವತ್ತು ವರ್ಷಗಳ ಸೇವೆಯಲ್ಲಿ ಒಂದೇ ಒಂದು ತಪ್ಪು ಮಾಡಿ 'Bad Report' ಬರೆಸಿಕೊಂಡರು. ಅದೆಂದರೆ, ಒಮ್ಮೆ ಮಹಾರಾಜರು ತಿರುಪತಿಗೆ ಹೋಗಬೇಕಾಗಿತ್ತು. ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಅರಮನೆಯಿಂದ

ಕಾಗದ ಬಂದಿತು. ವಿಷಯ ತುರ್ತಾಗಿತ್ತು. ರೆವಿನ್ಯೂ ಕಮೀಷನರು ಸಂಚಾರದಲ್ಲಿದ್ದರು. ಅವರ ಪರವಾಗಿ ನಾಗೇಗೌಡರು ಆರ್ಡರ್ ಮಾಡಿದರು. ಇದು ಅವರಿಗೆ ಸರಿಕಾಣಲಿಲ್ಲ. ಆದಕಾರಣ ಆ ವರ್ಷದ ರಹಸ್ಯ ವರದಿಯಲ್ಲಿ 'He takes too much for granted' ಎಂದು ಬರೆದರು.

೧೯೫೨ರಲ್ಲಿ ಮೊಟ್ಟಮೊದಲ ಮಹಾಚುನಾವಣೆ. ಆಗ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಕ್ಷೇತ್ರದ ಎಲ್ಲಾ ಸ್ಥಾನಗಳಿಗೂ ನಾಗೇಗೌಡರೇ ರಿಟರ್ನಿಂಗ್ ಆಫೀಸರು. ಬಹಳ ಜವಾಬ್ದಾರಿಯುತವಾಗಿ ದಕ್ಷತೆಯಿಂದ ಕೆಲಸ ನಿರ್ವಹಿಸಿದರು. ಚುನಾವಣೆ ಮುಗಿದ ತಕ್ಷಣ ಬೆಂಗಳೂರಿಗೆ ವರ್ಗವಾಯಿತು. ಹೊಸ ಮುಖ್ಯಮಂತ್ರಿಗಳ ಆಜ್ಞೆ ಆದಾಗಿತ್ತು. ಸೀನಿಯರ್ ಅಸಿಸ್ಟೆಂಟ್ ಕಮೀಷನರಿಗೆ ಮೀಸಲಾದ ಹುದ್ದೆ ಅದು. ಆದರೆ ಜೂನಿಯರ್ ಅಸಿಸ್ಟೆಂಟ್ ಕಮೀಷನರ್ ಆಗಿದ್ದ ನಾಗೇಗೌಡರಿಗೆ ಸಿಕ್ಕಿತ್ತು! ಅದೇ ರೆವಿನ್ಯೂ ಕಮೀಷನರ್ ಫಸ್ಟ್ ಗೆಜೆಟೆಡ್ ಅಸಿಸ್ಟೆಂಟ್ ಹುದ್ದೆ. ಸ್ವಲ್ಪ ಕಾಲದ ಅನಂತರ ಮೈಸೂರಿಗೆ ಫುಡ್ ಅಸಿಸ್ಟೆಂಟ್ ಹಾಗೂ ಸಿಟಿ ರೇಷನಿಂಗ್ ಆಫೀಸರ್ ಆಗಿ ಹೋದರು. ಅಲ್ಲಿಯೂ ತಮ್ಮ ನಿಷ್ಠಾವಂತ ಕೆಲಸದಿಂದ ಹೆಸರು ಗಳಿಸಿದರು. ಮೂರು ವರ್ಷ ಕೆಲಸ ಮಾಡಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿ ಹೋದರು. ಇಂಥ ಒಂದು ಹೊಸ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಅನೇಕ ಒತ್ತಡಗಳು ಇದ್ದುವು. ಬಂಡವಾಳ, ಸಾಲ-ಸೋಲ, ಲಾಭ-ನಷ್ಟ, ಓವರ್‌ಟೈಂ, ಷಿಫ್ಟ್, ಮುಷ್ಕರ ಇವುಗಳನ್ನು ಬಹಳ ವ್ಯವಸ್ಥಿತವಾಗಿ ನಿರ್ವಹಿಸಿದರು. ಇಲ್ಲಿ ಸ್ವಲ್ಪ ಕಾಲ ಸೇವೆ ಸಲ್ಲಿಸಿದ ಬಳಿಕ ಪಾಂಡವಪುರ ಸಹಕಾರ ಕಾರ್ಖಾನೆಗೆ ಕಾರ್ಯದರ್ಶಿಯಾಗಿ ಹೋದರು. ಆದರೆ ಆ ಕಾರ್ಖಾನೆ ಆಗ ತಾನೇ ಕಟ್ಟುವ ಕೆಲಸ ಆರಂಭವಾಗಿತ್ತು. ಮೂರು ವರ್ಷಗಳು ಅದರ ಕಟ್ಟುವ ಕೆಲಸದಲ್ಲಿಯೇ ಮುಗಿಯಿತು. ಏನೇ ಆಗಲಿ ಕಬ್ಬು ಅರೆದು ಸಕ್ಕರೆ ತಯಾರು ಮಾಡಿಯೇ ಹೋಗಬೇಕೆಂದು ನಿರ್ಧರಿಸಿದರು. ಆ ಪ್ರಕಾರ ಸಕ್ಕರೆ ಉತ್ಪಾದನೆಯು ಇವರ ಅವಧಿಯಲ್ಲೇ ಆಯಿತು. ಒಂದು ವರ್ಷ ಸಕ್ಕರೆ ತಯಾರಿಸಿ ಲಾಭವನ್ನು ಗಳಿಸಿದರು.

ಅಲ್ಲಿಂದ ಶಿವಮೊಗ್ಗಕ್ಕೆ ಜಿಲ್ಲಾಧಿಕಾರಿಯಾಗಿ ಹೋದರು. ಸಂಪೂರ್ಣ ಅಧಿಕಾರವನ್ನು ಬಳಸಿಕೊಂಡು ಸುಮಾರು ಹತ್ತು ಸಾವಿರ ಎಕರೆ ಜಮೀನು ಐದು ಸಾವಿರ ಜನರಿಗೆ ದೊರೆಯುವಂತೆ ಮಾಡಿದರು. ಗ್ರಾಮಾಭಿವೃದ್ಧಿಯನ್ನು ಕುರಿತ ಒಂದು ಕಲ್ಲಚ್ಚಿನ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಶಿವಮೊಗ್ಗದಲ್ಲಿ ಮ್ಯೂಜಿಯಂ ಒಂದನ್ನು ಸ್ಥಾಪನೆ ಮಾಡಿದ ಕೀರ್ತಿ ನಾಗೇಗೌಡರಿಗೆ ಸಲ್ಲುತ್ತದೆ. ಇಲ್ಲಿಂದ ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿ ವರ್ಗವಾದರು.

ಚಿಕ್ಕಮಗಳೂರಿನಲ್ಲಿ ಶಕ್ತಿಮೀರಿ ಕೆಲಸ ಮಾಡಿದರು. ಕಾಡು ನಾಡಿನ ಆಸ್ತಿ. ಅದು ಕಳ್ಳರ ಪಾಲಾಗಬಾರದು ಎಂದು ಪ್ರಾಣವನ್ನು ಲೆಕ್ಕಿಸದೆ ಸೇವೆಗೈದರು. ಆದರೆ ಅಲ್ಲಿ ಒಳಗೊಳಗೆ ನಡೆಸಿದ ಆಪಾದನೆಯ ಹಿನ್ನೆಲೆಯಲ್ಲಿ ಮಂಗಳೂರಿಗೆ ವರ್ಗ ಮಾಡಲಾಯಿತು.

ಈ ಜಿಲ್ಲೆಯಲ್ಲಿ ಒಳ್ಳೆಯ ಕೆಲಸಗಳಿಗೆ ಜನರು ಮುಂದಾಗುತ್ತಿದ್ದರು. ಆದ್ದರಿಂದ ಹೆಚ್ಚು ಆಸಕ್ತಿ ಹಾಗೂ ಉತ್ಸಾಹದಿಂದ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿದರು. ಸಾಂಸ್ಕೃತಿಕ ಚಟುವಟಿಕೆಗಳಿಗೆ ಈ ಜಿಲ್ಲೆ ಹೆಸರಾದದ್ದು. ಆದ್ದರಿಂದ ಎರಡನೆಯ ಜಾನಪದ ಸಮ್ಮೇಳನವನ್ನು ಮಂಗಳೂರಿನಲ್ಲಿ ಏರ್ಪಡಿಸಿದರು. ನಾಗೇಗೌಡರು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಮಂಗಳೂರಿನಲ್ಲಿ ಅಖಿಲ ಕರ್ನಾಟಕ ಮಕ್ಕಳ ಕೂಟ ನಡೆಯಿತು.

ಅಲ್ಲಿಂದ ರಾಜ್ಯದ ಲೇಬರ್ ಕಮೀಷನರ್ ಆಗಿ ಕಾರ್ಯ ನಿರ್ವಹಿಸಲಾರಂಭಿಸಿದರು. ಆಗ ಇಡೀ ರಾಜ್ಯವನ್ನೆಲ್ಲಾ ಸುತ್ತಾಡಿದರು. ತಾವು ಗಳಿಸಿದ್ದ ಅಪಾರ ಅನುಭವದಿಂದ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ನಾಲ್ಕು ವರ್ಷಗಳ ಸೇವೆಯ ಅನಂತರ ಸರ್ವೆ ಇಲಾಖೆಯ ಮುಖ್ಯಾಧಿಕಾರಿಯಾಗಿ ಹೋದರು. ಅತ್ಯಂತ ಹಳೆಯ ಇಲಾಖೆ ಇದು. ಈ ಇಲಾಖೆಗೆ ನಾಲಾಯಕ್ಕಾದವರನ್ನೇ ಹಾಕುತ್ತಾರೆಂಬ ಮಾತಿತ್ತು. ಆದರೆ ಈ ಮಾತನ್ನು ಸುಳ್ಳಾಗಿಸಿ ಬಹಳ ಆಸಕ್ತಿಯಿಂದ ಕೆಲಸ ನಿರ್ವಹಿಸಿದರು. ಈ ಕೆಲಸದ ಜೊತೆಗೆ ರಿಜಿಸ್ಟ್ರೇಷನ್ ಇಲಾಖೆ ಮತ್ತು ಧಾರ್ಮಿಕ ಇಲಾಖೆಗಳ ಮುಖ್ಯಾಧಿಕಾರಿಯೂ ಆಗಿದ್ದರು. ನಂತರ ಲೋಕಸೇವಾ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು ಗೌಡರು.

ರಾಜಕೀಯ ಕ್ಷೇತ್ರದಿಂದ ಬಹಳ ದೂರವೇ ಉಳಿದಿದ್ದ ನಾಗೇಗೌಡರು ೧೯೮೯ರಲ್ಲಿ ಮಂಡ್ಯ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಇದಕ್ಕೆ ಮುಖ್ಯ ಪ್ರೇರಕರು ಜನತಾ ಪಕ್ಷದ ಧುರೀಣರಾಗಿದ್ದ ಎಚ್.ಡಿ. ದೇವೇಗೌಡರು. ಕೇವಲ ಹದಿನೈದು ದಿವಸಗಳ ಪ್ರಚಾರ ಕಾರ್ಯ ಮಾಡಿ ೨,೬೨,೧೩೫ ಮತಗಳನ್ನು ಗಳಿಸಿ ೭೨ ಸಾವಿರ ಮತಗಳ ಅಂತರದಿಂದ ಸೋತರು.

ಸರ್ಕಾರದ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಕೊನೆಗೆ ಐ.ಎ.ಎಸ್. ಅಧಿಕಾರಿಯಾಗಿ ನಿವೃತ್ತರಾದ ನಾಗೇಗೌಡರು ಕರ್ತವ್ಯ ನಿಷ್ಠರು. ಪ್ರಾಮಾಣಿಕರು. ಎಂಥ ಕಡೆಗೂ ಮೀರಿ ಕೆಲಸ ಮಾಡುವುದು ಇವರ ಜಾಯಮಾನವಾಗಿತ್ತು. ಬದುಕಿನ ಉದ್ದಕ್ಕೂ ಶಿಸ್ತನ್ನು ರೂಢಿಸಿಕೊಂಡು ಬಂದವರು. ಇಂದಿಗೂ ಪ್ರತ್ಯೇಕ ಹಾಗೂ ಪರೋಕ್ಷವಾಗಿ ಜನಸೇವೆಯಲ್ಲಿ ತೊಡಗಿರುವ ಎಚ್.ಎಲ್. ನಾಗೇಗೌಡರನ್ನು ಗುರುತಿಸಿ ವಿಧಾನ ಪರಿಷತ್ ಸದಸ್ಯರನ್ನಾಗಿ ಸರ್ಕಾರ ನೇಮಕ ಮಾಡಿದೆ.

ಕೃತಿಗಳ ಮೂಲಕ ನಾಗೇಗೌಡರು

ಅನುವಾದಕರಾಗಿ :

ನಾಗೇಗೌಡರ ಸಾಧನೆ ಬಹುಮುಖವಾದುದು. ಓದಿದ್ದು ಬಿ.ಎಸ್ಸಿ, ಎಲ್.ಎಲ್.ಬಿ. ಸೇರಿದ್ದು ಆಡಳಿತ ಕ್ಷೇತ್ರದ ಹುದ್ದೆ. ಹಾಗಿದ್ದರೂ ಇವರಿಗೆ ಸಾಹಿತ್ಯ ಗೀಳು ಅಂಟಿಕೊಂಡಿದ್ದು ನಾಡಿನ ಭಾಗ್ಯ. ಕವಿಯಾಗಿ, ಕಾದಂಬರಿಕಾರರಾಗಿ, ಭಾಷಾಂತರಕಾರರಾಗಿ, ಕಥೆಗಾರರಾಗಿ, ಎಲ್ಲಕ್ಕಿಂತ ಮಿಗಿಲಾಗಿ ಉತ್ತಮ ಜಾನಪದ ಸಂಶೋಧಕರಾಗಿ ಮತ್ತು ಸಂಗ್ರಾಹಕಾರರಾಗಿ ನಾಡಿಗೆ ನೀಡಿರುವ ಕೊಡುಗೆ ಅಪಾರವಾದುದು. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಉತ್ತಮ ಪಾಂಡಿತ್ಯ ಪ್ರಭುತ್ವಗಳನ್ನು ಗಳಿಸಿಕೊಂಡಿರುವ ಶ್ರೀಯುತರು ಅಧಿಕಾರಿಯಾಗಿದ್ದುಕೊಂಡು ಅಪಾರ ಜವಾಬ್ದಾರಿ ಜೊತೆ ಜೊತೆಯಲ್ಲಿಯೇ ಸಾಹಿತ್ಯ ಕೃಷಿಯನ್ನೂ ಮಾಡಿರುವುದು ಮಹಾತ್ಸಾಧನೆಯೇ ಸರಿ.

ಕೆನಿಲ್‌ವರ್ತ್ :

೧೯೫೦ರಲ್ಲಿ ಇವರು ಭಾಷಾಂತರಕ್ಕೆ ಸಲ್ಲಿಸಿರುವ ಸೇವೆ ಮಹತ್ವದ್ದು. ಆದರೆ ಭಾಷಾಂತರ ಕೆಲಸಕ್ಕೆ ತೊಡಗಿಸಿಕೊಂಡ ಬಗೆ ಆಕಸ್ಮಿಕ. ೧೯೫೧-೫೨ರಲ್ಲಿ ಪ್ರೊಬೇಷನರಿ ತರಬೇತಿ ಮೈಸೂರಿನಲ್ಲಿ ನಡೆಯುತ್ತಿತ್ತು. ಅಲ್ಲಿ ಯಾರೋ ಇಟ್ಟು ಹೋಗಿದ್ದ ಕೆನಿಲ್‌ವರ್ತ್ ಇಂಗ್ಲಿಷ್ ಕಾದಂಬರಿ ನಾಗೇಗೌಡರ ಕಣ್ಣಿಗೆ ಬಿತ್ತು. ಅದನ್ನು ಓದಿ ಮುಗಿಸುವಷ್ಟರಲ್ಲಿ ಕನ್ನಡಕ್ಕೆ ಈ ಕೃತಿಯನ್ನು ಅನುವಾದಿಸಬೇಕು ಎಂಬ ಮನಸ್ಸಾಯಿತು. ಅನುವಾದ ಮಾಡಿದ ಬಳಿಕವೂ ಸುಮಾರು ಹತ್ತು ವರ್ಷಗಳ ಕಾಲ ಹಸ್ತಪ್ರತಿಯಾಗಿಯೇ ಉಳಿದಿತ್ತು. ಆನಂತರ ಒಮ್ಮೆ ಕುವೆಂಪು ಅವರಿಗೆ ತೋರಿಸಿದ ಪರಿಣಾಮ ಪುಸ್ತಕವಾಗಿ ಬಂದಿತು. ಇಂಟರ್‌ಮೀಡಿಯಟ್ ತರಗತಿಗೆ ಪಠ್ಯಪುಸ್ತಕವೂ ಆಗಿತ್ತು. ಈ ಕೃತಿಯ ಅನುವಾದಕ್ಕೆ ದೊರೆತ ಮನ್ನಣೆಯಿಂದ ಮುಂದೆಯೂ ಈ ಕೆಲಸವನ್ನು ಮುಂದುವರೆಸಿ ನಿರೀಕ್ಷೆಗೂ ಮೀರಿದಷ್ಟು ಸಾಧನೆಯನ್ನು ಇವರು ಮಾಡಿದ್ದಾರೆ.

ಕೆನಿಲ್‌ವರ್ತ್ ೧೯ನೆಯ ಶತಮಾನದ ಆದಿಯಲ್ಲಿ ಹೊರಬಂದ ಕೃತಿ. ಇದೊಂದು ಐತಿಹಾಸಿಕ ಕಾದಂಬರಿ.

ಕೆನಿಲ್‌ವರ್ತ್‌ನ ಮೂಲ ಕರ್ತೃ ಸರ್‌ವಾಲ್ಟರ್‌ಸ್ಕಾಟ್. ಮೂಲ ಕಾದಂಬರಿ ೪೫೩ ಪುಟಗಳಷ್ಟಿವೆ. ಕನ್ನಡ ಕೆನಿಲ್‌ವರ್ತ್ ೨೪೦ ಪುಟಗಳಲ್ಲಿ ಹರಡಿದೆ. ಮೂಲದ ಬೃಹತ್ ಗ್ರಂಥವನ್ನು ಕನ್ನಡಕ್ಕೆ ತರುವಾಗ ನಾಗೇಗೌಡರು ಸಂಗ್ರಹಮಾಡಿ ಅನುವಾದಿಸಿದ್ದಾರೆ. ಮೂಲ ಕೆನಿಲ್‌ವರ್ತ್ ವರ್ಣನೆಗಳಿಂದ ತುಂಬಿದೆ. ಆದರೆ ಕನ್ನಡದಲ್ಲಿ ಆ ವರ್ಣನೆಗಳು ಹಿತಮಿತವಾಗಿ ಬಂದಿವೆ. ನಾಗೇಗೌಡರು ಸಂಭಾಷಣೆಗಳಲ್ಲೂ ಸಹ ಸಂಗ್ರಹ ಗುಣವನ್ನು

ಕಾಪಾಡಿಕೊಂಡು ಬಂದಿದ್ದಾರೆ. ಕನ್ನಡದಲ್ಲಿ ಕಥೆಗೆ ಅಗತ್ಯವಿರುವಷ್ಟು ಭಾಗವನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಕೆಲವೊಮ್ಮೆ ಸಂಭಾಷಣೆಯ ಸಾರಾಂಶವನ್ನು ಮಾತ್ರ ಕೊಡುತ್ತಾರೆ.

ಮಾರ್ಕೊ ಪೋಲೋ ಪ್ರವಾಸ ಕಥನ - ೧೯೫೬ :

ಕನ್ನಡದಲ್ಲಿ ಪ್ರವಾಸ ಕಥನಗಳನ್ನು ಬರೆಯುತ್ತಿದ್ದುದು ವಿರಳ. ಪ್ರವಾಸ ಸಾಹಿತ್ಯ ಎಂಬ ಪ್ರಕಾರವೊಂದು ನಮ್ಮಲ್ಲಿರಲಿಲ್ಲ. ಅದು ಇತ್ತೀಚಿನದು. ಮೊಟ್ಟಮೊದಲಿಗೆ ಕನ್ನಡದಲ್ಲಿ ಪ್ರಕಟವಾದ ಪ್ರವಾಸ ಕಥನವೆಂದರೆ ಉತ್ತರ ಕನ್ನಡದ ಕರ್ಕಿ ವೆಂಕಟರಮಣ ಶಾಸ್ತ್ರಿಯವರ "ದಕ್ಷಿಣ ಭಾರತದ ಯಾತ್ರೆ" (೧೮೯೮). ಮತ್ತೆ ಕನ್ನಡದಲ್ಲಿ ಪ್ರವಾಸಕಥನ ಕಾಣಿಸಿಕೊಂಡುದು ಮೂವತ್ತು ವರ್ಷಗಳ ಅನಂತರ ಕ್ರಿ.ಶ. ೧೯೨೫ರಲ್ಲಿ. ಅದು ವೀ.ಸಿ. ಅವರ "ಪಂಪಾಯಾತ್ರೆ". ಅದೊಂದು ಅಪೂರ್ವ ಕೃತಿ. ಅಲ್ಲಿಂದೀಚೆಗೆ ಅನೇಕರು ಪ್ರವಾಸ ಕೃತಿಗಳನ್ನು ರಚಿಸಿದ್ದಾರೆ. ಕ್ರಿ.ಶ. ೧೯೫೬ರಲ್ಲಿ ನಾಗೇಗೌಡರು 'ಮಾರ್ಕೊ ಪೋಲೋ ಪ್ರವಾಸ ಕಥನ'ವನ್ನು ಕನ್ನಡಿಗರಿಗೆ ಕೊಟ್ಟರು.

ಮಾರ್ಕೊ ಪೋಲೋ ಪ್ರವಾಸ ಕಥನವನ್ನು ಮೊದಲು ಕನ್ನಡಕ್ಕೆ ತಂದ ಕೀರ್ತಿ ನಾಗೇಗೌಡರಿಗೆ ಸಲ್ಲುತ್ತದೆ. ಈ ಕೆಲಸಕ್ಕೆ ಪ್ರೇರಣೆ ನೀಡಿದವರು ಪ್ರೊ. ದೇ.ಜ.ಗೌ ಅವರು.

ವಾಸ್ತವವಾಗಿ ಕನ್ನಡದ ಮಾರ್ಕೊ ಪೋಲೋ ಪ್ರವಾಸ ಕಥನ ಅನುವಾದವಲ್ಲ; ಸಂಗ್ರಹ.

ನಾಗೇಗೌಡರು ಸಂಗ್ರಹಿಸಿ ಕೊಟ್ಟಿರುವ ಈ 'ಮಾರ್ಕೊ ಪೋಲೋ ಪ್ರವಾಸ ಕಥನ' ಕನ್ನಡ ಸಾಹಿತ್ಯ ಭಂಡಾರಕ್ಕೆ ಕೊಟ್ಟ ಉತ್ತಮವಾದ ಕೊಡುಗೆಯಾಗಿದೆ.

ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ (ಆತ್ಮಚರಿತ್ರೆ) ೧೯೬೭

ಇಂಗ್ಲೆಂಡಿನಲ್ಲಿ ಹುಟ್ಟಿ ವೃತ್ತಿಯಿಂದ ಪಾದ್ರಿಯಾಗಿ ಭಾರತಕ್ಕೆ ಬಂದು ಗಾಂಧೀಜಿಯವರಿಂದ ಪ್ರಭಾವಿತರಾಗಿ ಭಾರತೀಯ ಸಂಸ್ಕೃತಿಗೆ ಮಾರುಹೋಗಿ, ಭಾರತೀಯ ಗಿರಿಜನರ ನಡುವೆ ಬದುಕಿ, ಗಿರಿಜನ ಹೆಣ್ಣನ್ನು ಮದುವೆಯಾಗಿ ಭಾರತದ ಪೌರತ್ವವನ್ನು ಪಡೆದು ಅಪಾರಸೇವೆ ಸಲ್ಲಿಸಿದ ಎಲ್ವಿನ್ನರ ಹೆಸರು ಭಾರತದಲ್ಲಿ ಶಾಶ್ವತವಾಗಿ ನಿಲ್ಲುವಂಥದ್ದಾಗಿದೆ. ಇಂತಹ ಮೇಧಾವಿ ಭಾರತದ ಬಗ್ಗೆ ಅಪಾರ ಅಭಿಮಾನವನ್ನು ಹೊಂದಿ ಇಲ್ಲಿನ ಗಿರಿಜನರ ಬಗ್ಗೆ ಆಳವಾದ ಅಧ್ಯಯನ ನಡೆಸಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಈ ಮಹಾನ್ ವ್ಯಕ್ತಿಯ ಆತ್ಮಚರಿತ್ರೆ "The Tribal world of Verrier Elvin" ತುಂಬಾ ಪ್ರಸಿದ್ಧವಾದ ಕೃತಿಯಾಗಿದೆ. ಈ ಕೃತಿಗೆ ೧೯೬೫ರಲ್ಲಿ ಭಾರತದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆಯಿತು. ಇದು ಅತ್ಯುತ್ತಮ ಆತ್ಮಕಥನವಾಗಿದ್ದು ಮಾನವ ವಿಜ್ಞಾನ, ಜಾನಪದ, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಮಾರ್ಗದರ್ಶಕ ಕೃತಿಯಾಗಿಯೂ, ಉಳಿದವರಿಗೆ ಕುತೂಹಲಕರವಾದ ಉತ್ತಮ

ಸಾಹಿತ್ಯವಾಗಿಯೂ ಪರಿಣಮಿಸಿದೆ. ಇಂಥ ಕೃತಿಯೊಂದು ಕನ್ನಡಕ್ಕೆ ಅಗತ್ಯವಾಗಿ ಅನುವಾದ ಆಗಬೇಕಿತ್ತು. ಬಹುಮುಖ ಪ್ರತಿಭೆಯ ನಾಗೇಗೌಡರು ಈ ಕೃತಿಯ ಸಂಗ್ರಹಾನುವಾದವನ್ನು 'ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ' ಎಂಬ ಹೆಸರಿನಿಂದ ಕನ್ನಡಕ್ಕೆ ತಂದುದು ಶ್ಲಾಘನೀಯವಾದ ಕೆಲಸವಾಗಿದೆ.

ಎಲ್ವಿನರ ಬರವಣಿಗೆಯ ಸೊಬಗನ್ನು ಅನುಭವಿಸಿ ಅನುವಾದಿಸಿರುವ ಕೃತಿ ಇದು. ಈ ಕೃತಿಯು ಎಷ್ಟು ಸಹಜವಾಗಿದೆ ಎಂದರೆ ತಮ್ಮದೇ ಕೃತಿಯೋ ಎಂಬಷ್ಟು ಮೋಹಕವಾದ ಆತ್ಮೀಯ ಶೈಲಿಯಲ್ಲಿದೆ. ಸ್ವತಃ ಶ್ರೇಷ್ಠ ಜಾನಪದ ಸಂಗ್ರಾಹಕರಾದ ಅವರು ಈ ಕೃತಿಯನ್ನು ಅನುವಾದ ಮಾಡಿರುವುದು ಎಲ್ವಿನ್‌ರ ಬಗ್ಗೆ ಇರುವ ಅಪಾರ ಗೌರವ, ಮಾನವ ವಿಜ್ಞಾನದ ಬಗ್ಗೆ ಇರುವ ಆಸಕ್ತಿಯೇ ಕಾರಣವಾಗಿದೆ. ಅನುವಾದಿತ ಗ್ರಂಥಕ್ಕೆ ವಿದ್ವತ್‌ಪೂರ್ಣವಾದ ಪೀಠಿಕೆಯನ್ನು ಬರೆದು, ಭಾರತದಲ್ಲಿ ಧರ್ಮ ಪ್ರಸಾರಕ್ಕೆ ಬಂದ ಕ್ರೈಸ್ತ ಮಿಷನರಿಗಳ ಬಗ್ಗೆ ಅಪೂರ್ವವಾದ ಮಾಹಿತಿಯನ್ನು ಕೊಟ್ಟು, ಎಲ್ವಿನರ ಸಾಧನೆಗಳನ್ನೂ ವಿವರಿಸಿದ್ದಾರೆ. ಈ ಪೀಠಿಕೆ ತುಂಬಾ ರಉಪಯುಕ್ತವಾಗಿದ್ದು ಗ್ರಂಥದ ಮಹತ್ವವನ್ನು ಹೆಚ್ಚಿಸುತ್ತದೆ. ಡಾ. ಶಿವರಾಮಕಾರಂತ ಮುನ್ನುಡಿಯನ್ನು ಬರೆದು ನಾಗೇಗೌಡರ ಹಾಗೂ ಗ್ರಂಥದ ಮಹತ್ವವನ್ನು ಸ್ಪಷ್ಟಗೊಳಿಸಿದ್ದಾರೆ. ಇವೆಲ್ಲವನ್ನೂ ಒಳಗೊಂಡ 'ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ' ಕನ್ನಡ ಅನುವಾದ ಒಂದು ಮಹತ್ವದ ಕೊಡುಗೆಯಾಗಿದೆ.

ಪ್ರವಾಸಿ ಕಂಡ ಇಂಡಿಯಾ : ಏಳು ಸಂಪುಟಗಳು

ಯಾವುದೇ ಒಂದು ದೇಶದ ಇತಿಹಾಸ ಪರಿಚಯಕ್ಕೆ, ಪುನರ್‌ರಚನೆಗೆ ದೊರೆಯುವ ಆಕಾರಗಳು ಎರಡು ರೀತಿಯವು. ಬರಹಗಳು ಮತ್ತು ಪುರಾತತ್ವ ಆಧಾರಗಳು. ಅವು ದೇಶಿಯ ಬರಹ ಅಥವಾ ವಿದೇಶಿಯ ಬರಹಗಳಾಗಿರಬಹುದು. ಸಹಜವಾಗಿಯೆ ಭಾರತದ ಇತಿಹಾಸದ ಬಗೆಗೂ ಈ ವಿಂಗಡಣೆ ಅನ್ವಯವಾಗುತ್ತದೆ. ವಿದೇಶಿ ಪ್ರವಾಸಿಗಳು ವಿವಿಧ ಉದ್ದೇಶಗಳಿಂದ ಈ ದೇಶವನ್ನು ಸಂದರ್ಶಿಸಿದ್ದಾರೆ. ಅವರು ಕಂಡದ್ದು, ಕೇಳಿದ್ದು ಎಲ್ಲವೂ ಸೇರಿ ಭಾರತದ ಬಗ್ಗೆ ಹಲವು ಸ್ವಾರಸ್ಯಕರ ವಿಚಾರಗಳನ್ನು ದಾಖಲಿಸಿದ್ದಾರೆ. ಆದರೆ ಅವುಗಳೆಲ್ಲವೂ ಇಂಗ್ಲಿಷ್ ಭಾಷೆಗೆ ಅನುವಾದಿಸಲ್ಪಟ್ಟಿವೆ. ಅವನ್ನು ಕನ್ನಡಿಸುವ ಮಹಾಕಾರ್ಯವನ್ನು ಕೈಗೊಂಡ ನಾಗೇಗೌಡರು ೧೯೭೪ ರಿಂದ 'ಪ್ರವಾಸಿ ಕಂಡ ಇಂಡಿಯಾ' ಎಂಬ ಶೀರ್ಷಿಕೆಯಲ್ಲಿ ಏಳು ಬೃಹತ್ ಸಂಪುಟಗಳನ್ನು ನೀಡಿದ್ದಾರೆ. (ಎಂಟು, ಒಂಬತ್ತು ಮತ್ತು ಹತ್ತನೆಯ ಸಂಪುಟಗಳು ಅಚ್ಚಿನಲ್ಲಿವೆ). ಈ ಸಂಪುಟಗಳುದ್ದಕ್ಕೂ ಶ್ರೀಯುತರು ಸಾಹಿತಿಗಳಾಗಿ, ವಿಮರ್ಶಕರಾಗಿ, ಇತಿಹಾಸಕಾರರಾಗಿ ಮತ್ತು ಭಾಷಾಂತರಕಾರರಾಗಿ ಕಾರ್ಯವೆಸಗಿದ್ದಾರೆ.

'ಪ್ರವಾಸಿ ಕಂಡ ಇಂಡಿಯಾ' ಮೊದಲ ಸಂಪುಟವು ಸುಮಾರು ಐದುನೂರು ಪುಟಗಳಷ್ಟಿದೆ. ಪ್ರಸ್ತುತ ಸಂಪುಟದಲ್ಲಿ ಕ್ರಿ.ಪೂ. ೫ನೆಯ ಶತಮಾನದಿಂದ ಕ್ರಿ.ಶ. ೧೪ನೆಯ

ಶತಮಾನದವರೆಗಿನ ಒಟ್ಟು ೩ಲ ಗ್ರೀಕ್, ರೋಮನ್, ಚೀನಾ ಮತ್ತು ಅರಬ್ ಪ್ರವಾಸಿಗಳ, ಭೂಗೋಳ ಶಾಸ್ತ್ರಜ್ಞರ ಮತ್ತು ಇತಿಹಾಸಕಾರರ ಭಾರತದ ಬಗೆಗಿನ ವರ್ಣನೆ ವೃತ್ತಾಂತಗಳನ್ನು ಅನುವಾದಿಸಿ ಕೊಟ್ಟಿದ್ದಾರೆ. ಇಲ್ಲಿ ವಿಶೇಷವಾಗಿ ಪ್ರಕೃತಿ ವರ್ಣನೆ, ವಿವಿಧ ಜನಾಂಗಗಳ ಆಚಾರ ವಿಚಾರಗಳ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಕಾಣಬಹುದಾಗಿದೆ. ಇಲ್ಲಿನ ಒಂದು ವಿಶೇಷವೆಂದರೆ, ಭಾರತಕ್ಕೆ ಸಂಬಂಧಿಸಿದಂತೆ ವಿವಿಧ ದೇಶದ, ವಿವಿಧ ಉದ್ದೇಶದ ಪ್ರವಾಸಿಗಳ ವರದಿ-ವೃತ್ತಾಂತಗಳನ್ನು ಬೇರೆ ಬೇರೆ ಆಕರಗಳಿಂದ ಸಂಗ್ರಹಿಸಿ, ಕನ್ನಡಿಸಿ ಅವಶ್ಯವಾದಲ್ಲಿ ಅಡಿ ಟಿಪ್ಪಣಿಗಳನ್ನು ಕೊಟ್ಟು ಪ್ರವಾಸಿಗಳ ಹೇಳಿಕೆ ಸರಿಯಾದುದೇ ಅಲ್ಲವೆ ಎಂಬುದನ್ನು ವಿಶ್ಲೇಷಿಸಿ ವೈಜ್ಞಾನಿಕ ಸಂಗ್ರಹ ಮಾಡಿರುವುದು. ಇತಿಹಾಸವಾಗಲೀ, ಸಾಹಿತ್ಯವಾಗಲೀ ತಮ್ಮ ಅಭ್ಯಾಸ ವಿಷಯ ಆಗಿರಲಿಲ್ಲವೆಂದೂ ಈ ಕೆಲಸದಲ್ಲಿ ಅನೇಕ ಲೋಪದೋಷಗಳನ್ನು ಕಾಣಲು ಸಾಧ್ಯವೆಂದು ತಿಳಿಸುತ್ತ ತಮ್ಮ ಕ್ಷೇತ್ರವಲ್ಲದ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಕ್ಕೆ 'ಆ ಕ್ಷೇತ್ರದ ತಜ್ಞರ ಕ್ಷಮೆ' ಬೇಡಿರುವುದು ಅವರ ವಿನಯದ ಸಂಕೇತವಷ್ಟೇ. ಅನುವಾದ ಕಾರ್ಯದಲ್ಲಿ ಶ್ರೀಯುತರು ಯಶಸ್ವಿಯಾಗಿದ್ದಾರೆ. ಭಾಷೆ ಸರಳವೂ ಸುಲಲಿತವೂ ಆಗಿದ್ದು ನಿರೂಪಣೆ ಸರಾಗವಾಗಿದೆ. ಇಂಥದೊಂದು ಸಂಗ್ರಹಕಾರ್ಯ ಕನ್ನಡದಲ್ಲಿ ನಡೆದಿರುವುದು ನಿಜಕ್ಕೂ ಹೆಮ್ಮೆಯ ವಿಚಾರ.

'ಪ್ರವಾಸಿ ಕಂಡ ಇಂಡಿಯಾ' ಎರಡನೆಯ ಸಂಪುಟದಲ್ಲಿ ಕ್ರಿ.ಶ. ೧೩ನೆಯ ಶತಮಾನದಿಂದ ೧೭ನೆಯ ಶತಮಾನದ ಕೊನೆಯವರೆಗೆ ಭಾರತವನ್ನು ಸಂದರ್ಶಿಸಿದ ಪ್ರವಾಸಿಗಳ ಕಥನವಿದೆ. ಈ ಸಂಪುಟ ಕನ್ನಡಿಗರಿಗೆ ಬಹು ಮುಖ್ಯವಾದದ್ದು. ಕರ್ನಾಟಕದ ಇತಿಹಾಸವನ್ನು ಕುರಿತ ಸಾಕಷ್ಟು ವಿಷಯಗಳನ್ನು ಈ ಅವಧಿಯಲ್ಲಿ ಭಾರತಕ್ಕೆ ಬಂದು ಹೋದ ಪ್ರವಾಸಿಗಳ ಕಥನದಿಂದ ತಿಳಿಯಬಹುದು. ವಿಜಯನಗರ ಸ್ಥಾಪನೆ, ಅಭ್ಯುದಯ, ಅವನತಿ, ವಾಸ್ಕೊ-ಡ-ಗಾಮ ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡು ಹಿಡಿದದ್ದು, ಪೋರ್ಚುಗೀಸ್ ಸಾಮ್ರಾಜ್ಯ ಗೋವಾದಲ್ಲಿ ಸ್ಥಾಪನೆಗೊಂಡಿದ್ದು - ಇತ್ಯಾದಿ ಮಹತ್ತರ ಅಂಶಗಳು ಎರಡನೆಯ ಈ ಸಂಪುಟದಲ್ಲಿದೆ. ಆ ಅವಧಿಯಲ್ಲಿ ಭಾರತವನ್ನು ಸಂದರ್ಶಿಸಿದ ಇಪ್ಪತ್ತೂ‌ಮ್ರು ಪ್ರವಾಸಿಗಳ ಕಥನವನ್ನು ನಾಗೇಗೌಡರು ನಮ್ಮ ಮುಂದಿರಿಸಿದ್ದಾರೆ. ಪುಸ್ತಕದ ಕೊನೆಯಲ್ಲಿ ವಿಜಯನಗರದ ಅರಸರ ವಂಶಾವಳಿಯನ್ನು ನೀಡಿದ್ದಾರೆ. ಈ ಗ್ರಂಥದಲ್ಲಿ ಇಪ್ಪತ್ತೆರಡು ಚಿತ್ರಗಳನ್ನು ಮೂರು ಭೂಪಟಗಳನ್ನು ಅಳವಡಿಸಿದ್ದಾರೆ. ಈ ಚಿತ್ರಗಳನ್ನು ನೋಡಿದಾಗ ಅಂದಿನ ಕಾಲದ ಅನೇಕ ಘಟನೆಗಳು ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

ಪ್ರತಿಯೊಬ್ಬ ಪ್ರವಾಸಿಯ ಪ್ರವಾಸ ಕಥನವನ್ನು ಹೇಳುವ ಮೊದಲು ಅನುವಾದಕರು ಆ ಪ್ರವಾಸಿಯ ಜೀವನ ಮತ್ತು ವ್ಯಕ್ತಿತ್ವವನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಪ್ರವಾಸಿಗಳ ಹೇಳಿಕೆಗಳನ್ನು ಅಲ್ಲಲ್ಲಿ ತಿದ್ದಿ ಸರಿ-ತಪ್ಪು ಎಂಬುದನ್ನು ಆಧಾರಸಹಿತ ಅಡಿಟಿಪ್ಪಣಿಗಳಲ್ಲಿ ವಿವರಿಸಿದ್ದಾರೆ. ಮಾರ್ಕೊ ಪೋಲೋನ ಪ್ರವಾಸದ

ಮುಖ್ಯಾಂಶಗಳನ್ನು ವಿವರಿಸುವಾಗ ಅವನ ಜನ್ಮದಿಂದ ಮರಣದವರೆಗೂ ವಿವರಣೆ ನೀಡಿ ಅವನು ಇಂಡಿಯಾದ ಬಗ್ಗೆ ಬರೆದುದನ್ನು ಮಾತ್ರ ಪ್ರಸ್ತಾಪಿಸಿದ್ದಾರೆ.

ಹೀಗೆ ಇಪ್ಪತ್ತೂರು ಪ್ರವಾಸಿಗಳ ಕಥನವನ್ನು ಅತ್ಯಂತ ಸೊಗಸಾದ ಶೈಲಿಯಲ್ಲಿ ನಿರೂಪಿಸಿ ಕನ್ನಡದಲ್ಲಿ ಪ್ರವಾಸ ಸಾಹಿತ್ಯಕ್ಕೆ ಶ್ರೀಯುತರು ಅಪೂರ್ವ ಕೊಡುಗೆಯನ್ನು ಕೊಟ್ಟಿದ್ದಾರೆ. ಅದರಲ್ಲಿಯೂ ಎರಡನೆಯ ಈ ಸಂಪುಟ ಕರ್ನಾಟಕದ ದೃಷ್ಟಿಯಿಂದ ಬಹಳ ಮಹತ್ವದ್ದು. ಈ ಸಂಪುಟ ಕರ್ನಾಟಕದ ವಿಶೇಷತೆ ಹಾಗೂ ವಿಜಯನಗರದ ಚರಿತ್ರೆಗೆ ಸಂಬಂಧಿಸಿದಂತೆ ಉತ್ತಮ ಆಕಾರ ಗ್ರಂಥವಾಗುವಂತೆ ನಾಗೇಗೌಡರು ಶ್ರಮಿಸಿದ್ದಾರೆ.

'ಪ್ರವಾಸಿ ಕಂಡ ಇಂಡಿಯಾ' ಮೂರನೆಯ ಸಂಪುಟ ವಿಷಯ ವೈವಿಧ್ಯ, ನಿರೂಪಣೆಯ ದೃಷ್ಟಿಯಿಂದಲೂ ಸ್ವಾರಸ್ಯಕರವಾಗಿದೆ. ಕ್ರಿ.ಶ. ೧೫೭೯ ರಿಂದ ೧೬೧೯ರವರೆಗಿನ ಸುಮಾರು ನಲವತ್ತು ವರ್ಷಗಳ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ಹದಿನಾರು ಜನ ಐರೋಪ್ಯ ಪ್ರವಾಸಿಗಳ ಕಥನಗಳು ಇಲ್ಲಿ ರೂಪಾಂತರಗೊಂಡು ಸಂಗ್ರಹಿತವಾಗಿವೆ. ಇಂಡಿಯಾಕ್ಕೆ ಬಂದ ಇಂಗ್ಲಿಷಿನವರಲ್ಲಿ ಮೊಟ್ಟ ಮೊದಲಿಗನೆಂದು ಹೇಳಲಾದ ಫಾದರ್ ಥಾಮಸ್ ಸ್ಟೀವನ್ಸ್(Father Thomas Stevens - 1579-1619) ನಿಂದ ಹಿಡಿದು ಇಂಡಿಯಾದ ಬಗ್ಗೆ ಬರೆದಿರುವ ಮೊಟ್ಟಮೊದಲನೆಯ ಫ್ರೆಂಚ್ ಪ್ರವಾಸಿ ಎಂದು ಹೇಳಲಾದ ಫ್ರಾನ್ಸುವಾ ಪಿರಾಡ್ ದೆ ಲವಲ್ (Francios Pyrad de Laval 1601-1608)ವರೆಗಿನ ಈ ಕಥನ ಪ್ರಧಾನವಾಗಿ ಹದಿನಾರು ಹದಿನೇಳನೆಯ ಶತಮಾನಕ್ಕೆ ಸಂಬಂಧಿಸಿದೆ.

ಫಾದರ್ ಥಾಮಸ್ ಸ್ಟೀವೆನ್ಸ್, ಅಕ್ಬರ್ ಮತ್ತು ಜೆಸೂಯಿಟ್ ಪಾದ್ರಿಗಳು, ಜಾನ್ ಎಲ್ಫ್ರಿಡ್, ಸೂರತ್, ಸರ್‌ಥಾಮಸ್‌ರೋ, ಎಡ್ವರ್ಡ್ ಟೆರ್ರಿ, ಥಾಮಸ್ ಕೊರ್ಯಾತ್ ಮತ್ತು ಲಿನ್‌ಸ್ಕೊತೆನ್‌ರ ಎಂಟು ರೇಖಾ ಚಿತ್ರಗಳನ್ನೂ ಸುದೀರ್ಘವಾದ ಉಪಯುಕ್ತ ಪ್ರಸ್ತಾವನೆಯನ್ನು (ಪುಟ VII - XXVII) ಅಲ್ಲಲ್ಲಿ ಯಥೋಚಿತವಾದ ಅಡಿಟಿಪ್ಪಣಿಗಳನ್ನೂ ಪುಸ್ತಕದ ಕೊನೆಗೆ ಗ್ರಂಥ ಋಣ (ಪುಟ ೫೭೯-೫೪೧) ಹಾಗೂ ಅಕ್ಷರಾನುಕ್ರಮಣಿಕೆಯನ್ನೂ ಕೊಡಲಾಗಿದೆ. ಇವುಗಳಿಂದಾಗಿ ಗ್ರಂಥದ ಉಪಯುಕ್ತತೆ ಹೆಚ್ಚಿದೆ. ಈ ಸಂಪುಟದಲ್ಲಿರುವ ಸಣ್ಣಪುಟ್ಟ ದೋಷಗಳಿಗಿಂತ ಹೆಚ್ಚಾಗಿ ಗುಣಗಳೇ ಪ್ರಧಾನವಾಗಿ ಕೃತಿ ಹೆಚ್ಚು ಉಪಯುಕ್ತವಾಗಿದೆ.

ಉಳಿದ ಸಂಪುಟಗಳಲ್ಲಿ ಕಂಡು ಬರುವಂತೆ ಮೂರನೆಯ ಸಂಪುಟದಲ್ಲಿಯೂ ಪ್ರವಾಸಿಯ ಪರಿಚಯ, ಅವರ ಪ್ರವಾಸ ಕಥನದ ಮಹತ್ವ, ಕಥನದಲ್ಲಿಯ ಸಂಗತಿಗಳ ಸತ್ಯಾಸತ್ಯತೆಗಳ ಸಮೀಕ್ಷೆ ಮಾಡಿಕೊಡುವ ವಿಧಾನ, ಜೊತೆಗೆ ಉಪಯುಕ್ತವಾದ ಪ್ರಾಸ್ತಾವಿಕ ಟಿಪ್ಪಣಿಗಳೂ ಪ್ರತಿಯೊಂದು ಕಥನದ ಆರಂಭದಲ್ಲೂ ಸಣ್ಣ ಅಕ್ಷರಗಳಲ್ಲಿ ಮುದ್ರಿತವಾಗಿವೆ. ಮೂಲ ಕಥನಗಳಲ್ಲಿರುವ ಸೌಂದರ್ಯ ಸರಳತೆಗೆ ಕುಂದುಬರದಂತೆ

ವಸ್ತುಯೋಗ್ಯವಾದ ಭಾಷೆಯನ್ನೇ ಬಳಸಿ ಭಾಷಾಂತರಿಸಿದ್ದಾರೆ. ಆದ್ದರಿಂದ ಇದು ಕೇವಲ ಇತಿಹಾಸತಜ್ಞರಿಗೆ, ಸಂಶೋಧಕರಿಗೆ ಮಾತ್ರ ಮೀಸಲಾಗಿರದೆ ಜನಸಾಮಾನ್ಯ ಓದುಗರಿಗೂ ಅರ್ಥವಾಗುವ, ಕುತೂಹಲ ಕೆರಳಿಸುವಷ್ಟು ರಂಜಕ ಗುಣಗಳಿಂದ ಕೂಡಿದೆ.

"ಪ್ರಪಂಚದ ಬಗ್ಗೆ ಹತ್ತು ಜನರು ಹೇಳುವುದನ್ನು ಕೇಳುವುದಕ್ಕಿಂತ ಒಂದು ಬಾರಿ ಕಣ್ಣಿಂದ ನೋಡುವುದು ಉತ್ತಮ" ಎಂಬ ಅಭಿಪ್ರಾಯದಿಂದ ಪ್ರವಾಸ ಹೊರಟ ಇಟಲಿಯ ಲೊಡೊವಿಕೊದಿವರ್ತಿಯಾ (೧೫೦೨-೧೫೦೮)ನಿಂದ ಜರ್ಮನಿಯ ಮಂಡೆಲ್ ಸ್ಲೊ (೧೬೩೮-೧೬೪೦) ವರೆಗಿನ ಹದಿನೈದು ಮಂದಿ ಕಂಡ ವಿಷಯಗಳನ್ನು 'ಪ್ರವಾಸಿ ಕಂಡ ಇಂಡಿಯಾ' ನಾಲ್ಕನೆಯ ಸಂಪುಟ ಒಳಗೊಂಡಿದೆ.

ಪ್ರವಾಸದ ಗುರಿ ಇಂಡಿಯಾ ಆದರೂ ಬಹುತೇಕ ಪ್ರವಾಸಿಗರು ತಾವು ಕಂಡ, ಎದುರಿಸಿದ ಕಷ್ಟನಷ್ಟಗಳು, ಅಲ್ಲಿನ ಜನರ ರೀತಿ ನೀತಿ ವರ್ತನೆಗಳನ್ನು ಕೊಡುತ್ತಾರೆ. ಇದರಿಂದ ಆಯಾ ದೇಶದ ರಾಜಕೀಯ, ಸಾಮಾಜಿಕ, ಧಾರ್ಮಿಕ ಜನಜೀವನದ ಚಿತ್ರ ನಮಗೆ ದೊರೆಯುತ್ತದೆ. ಪ್ರವಾಸಿಗರು ಒಳಭಾರತದ ಹಳ್ಳಿಯ ಚಿತ್ರಗಳನ್ನು ಕೊಡುವುದಿಲ್ಲ. ಕಾರಣ ತೀರ ಪ್ರದೇಶಗಳಲ್ಲಿ ಮಾತ್ರ ಹಾದು ಹೋಗುತ್ತಾರೆ. ವಿದೇಶಿ ಪ್ರವಾಸಿಗರು ಪ್ರಧಾನವಾಗಿ ವ್ಯಾಪಾರಿಗಳಾದುದರಿಂದ ಸಾಮಾಜಿಕ ಸ್ತರಗಳ ಬಗ್ಗೆ ಅಷ್ಟಾಗಿ ಗಮನ ಹರಿಸಿದಂತೆ ಕಾಣುವುದಿಲ್ಲ.

ಭಾರತದಲ್ಲಿ ಇವರಿಗೆ ಶವಸಂಸ್ಕಾರ, ಸಹಗಮನ ಪದ್ಧತಿ, ಜಾತಿ ಪದ್ಧತಿ, ಬಾಲ್ಯವಿವಾಹ, ವಿಧವೆಯರ ಸ್ಥಿತಿಗತಿ - ಇಂತಹ ಹಲವಾರು ಸಂಪ್ರದಾಯ ಆಚರಣೆಗಳು ಅತ್ಯಂತ ಕುತೂಹಲದ ಸಂಗತಿಗಳಾಗಿ ಕಂಡಿವೆ. ರಾಜರ ವೈಭವ ಜೀವನ, ಹಳ್ಳಿಗಾಡುಗಳಲ್ಲಿ ಕಡುಬಡತನ, ಮೂಢನಂಬಿಕೆ, ವೈದಿಕ ಸಂಪ್ರದಾಯದ ಗೊಡ್ಡುತನವನ್ನು ಕುರಿತು ಹೇಳುತ್ತಾ ಇದು ಜನರನ್ನು ವೀರರನ್ನಾಗಿ ಮಾಡುವ ಬದಲು ಹೇಡಿಗಳನ್ನಾಗಿ ಮಾಡಿದೆಯೆಂದು ಮತ್ತೊಬ್ಬ ಪ್ರವಾಸಿ ಹೇಳುತ್ತಾನೆ. ಒಟ್ಟಾರೆ ಭಾರತೀಯರಲ್ಲಿ ರೂಢಿಯಲ್ಲಿರುವ ಆಚರಣೆ, ಸಂಪ್ರದಾಯಗಳು ಮತ್ತು ಕೆಲವು ಮೂಢನಂಬಿಕೆಗಳ ಬಗ್ಗೆ ಗಮನ ಸೆಳೆಯುವ ಈ ಸಂಪುಟವು ವೈಚಾರಿಕ ಆಲೋಚನೆಗೆ ಎಡೆಮಾಡಿಕೊಡುತ್ತದೆ.

ಪ್ರಸ್ತುತ ಪ್ರವಾಸಿ ಕಂಡ ಇಂಡಿಯಾ ಐದನೆಯ ಸಂಪುಟದಲ್ಲಿ ಫ್ರಾನ್ಸ್ ದೇಶದ ಫ್ರಾನ್ಸ್ವಾಸ್ ಬೆರ್‌ನ್ಯೇ (೧೬೫೮-೧೬೬೭) ಮತ್ತು ಬ್ಯಾಪ್ಟಿಸ್ಟ್ ಟಾವೆರ್‌ನ್ಯೇ (೧೬೪೧-೧೬೬೭) ಎನ್ನುವ ಇಬ್ಬರು ಪ್ರವಾಸಿಗರ ಕಥನಗಳಿವೆ. ಅವರಲ್ಲಿ ಬೆರ್‌ನ್ಯೇ ವೈದ್ಯ. ಟಾವೆರ್‌ನ್ಯೇ ವಜ್ರ ವ್ಯಾಪಾರಿ. ಬೆರ್‌ನ್ಯೇ ಉತ್ತರ ಭಾರತದಲ್ಲಿ ಹೆಚ್ಚು ಸಂಚರಿಸಿದರೆ, ಟಾವೆರ್‌ನ್ಯೇ ದಕ್ಷಿಣ ಮತ್ತು ಮಧ್ಯ ಭಾರತದಲ್ಲಿ ಹೆಚ್ಚು ವಾಸಿಸಿದವನು. ಈ ಇಬ್ಬರಲ್ಲಿಯೂ ಪ್ರವಾಸಿಗರಿಗೆ ಇರಬೇಕಾದ ಕುತೂಹಲ, ತಾಳ್ಮೆ, ಕಷ್ಟಸಹಿಷ್ಣುತೆಯ ಜೊತೆಗೆ ಪ್ರಾಮಾಣಿಕತೆಯೂ ಇದೆ.

ಈ ಇಬ್ಬರು ಪ್ರವಾಸಿಗರು ಭಾರತದಲ್ಲಿ ಸಂಚರಿಸಿದ ಕಾಲ ತುಂಬ ಸೂಕ್ಷ್ಮವಾದುದು. ಷಾಜಹಾನನ ಆಳ್ವಿಕೆ ಮುಗಿದು ಆತನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ದಾಯಾದಿ ಕಲಹ ನಡೆದು, ಔರಂಗಜೇಬ ಸಿಂಹಾಸನದ ಮೇಲೆ ಉಪಸ್ಥಿತವಾಗುವ ಕಾಲ ಅದಾಗಿತ್ತು. ಅಂದಿನ ರಾಜ್ಯದಾಹದಲ್ಲಿ ಭಾಗವಹಿಸಿದ ದಾರ, ಮೊರಾದ್, ಸೂಜಿ, ಔರಂಗಜೇಬ ಎಲ್ಲರ ಪರಿಚಯ ಬೆರ್‌ನ್ಯೇಗೆ ಆಗಿತ್ತು. ಔರಂಗಜೇಬ ಉಳಿದ ಸೋದರರಿಗೆ ಮಣ್ಣುಮುಕ್ಕಿಸಿದ ರೀತಿ ರೋಮಾಂಚನಕಾರಿಯಾಗಿ ಇಲ್ಲಿ ವರ್ಣಿತವಾಗಿದೆ.

ಬೆರ್‌ನ್ಯೇ ಮತ್ತು ಟಾವೆರ್‌ನ್ಯೇ ಬರಹಗಳಲ್ಲಿ ಸಮಕಾಲೀನ ಸಾಮಾಜಿಕ ಪರಿಸ್ಥಿತಿಗಳು ಚಿತ್ರಿತವಾಗಿವೆ. ಬಸವಿ ಬಿಡುವುದು, ಸತಿಪದ್ಧತಿ, ಸೂರ್ಯಗ್ರಹಣ, ವರ್ಣಾಶ್ರಮ ಧರ್ಮಗಳ ಬಗ್ಗೆ ವರ್ಣನೆ ಇದೆ. ಬರಹಗಳಲ್ಲಿ ಟಾವೆರ್‌ನ್ಯೇ ಬರಹಗಳಿಗಿಂತ ಬೆರ್‌ನ್ಯೇ ಬರಹಗಳು ಹೃದಯಸ್ಪರ್ಶಿಯಾಗಿವೆ. ಆತ ಇತಿಹಾಸವನ್ನು ಚಿತ್ರಿಸುವಲ್ಲಿ, ಸಂಪ್ರದಾಯಗಳನ್ನು ಗಮನಿಸುವಲ್ಲಿ, ತನ್ನ ದೇಶ ಮತ್ತು ಭಾರತದ ಕುರಿತಾದ ಹೋಲಿಕೆಯಲ್ಲಿ, ತಾನು ಕಂಡ ಜನರ ಸ್ವಭಾವ ಚಿತ್ರಣವನ್ನು ನೀಡುವಲ್ಲಿ ತುಂಬ ಮುತುವರ್ಜಿಯನ್ನು ವಹಿಸಿದ್ದಾನೆ. ಆದ್ದರಿಂದ ಇವುಗಳೆಲ್ಲವೂ ಆ ಕಾಲದ ಅಧಿಕೃತ ದಾಖಲೆಗಳಾಗಿ ನಿಲ್ಲುತ್ತವೆ.

‘ಪ್ರವಾಸಿ ಕಂಡ ಇಂಡಿಯಾ’ ಆರನೆಯ ಸಂಪುಟದಲ್ಲಿ ಇಟಲಿಯ ಒಬ್ಬನೇ ಪ್ರವಾಸಿಯಾದ ಮನೂಚಿಯ ಕಥನಕ್ಕೆ ಮೀಸಲಾಗಿದೆ. ನಿಕೊಲೊ ಮನೂಚಿ ಪರಿಚಯದ ಅನಂತರ ಕ್ರಮವಾಗಿ ಎಂಟು ಅಧ್ಯಾಯಗಳಲ್ಲಿ ‘ಸೂರತ್ತಿನಿಂದ ಆಗ್ರಾಕ್ಕೆ’, ‘ಸಿಂಹಾಸನಕ್ಕಾಗಿ’, ‘ಔರಂಗಜೇಬನ ದರ್ಬಾರು’, ‘ಔರಂಗಜೇಬನ ದಂಡಯಾತ್ರೆಗಳು’, ‘ಮೊಗಲ್ ಚಕ್ರಾಧಿಪತ್ಯದ ಸ್ಥಿತಿಗತಿಗಳು’, ‘ಹಿಂದುಗಳನ್ನು ಕುರಿತು’ ಮತ್ತು ‘ಹಲವಾರು ಸಂಗತಿಗಳು’ ಅಡಕವಾಗಿವೆ. ಕೊನೆಯ ಅಧ್ಯಾಯದಲ್ಲಿ (ಪುಟ ೩೦೧ ರಿಂದ ೪೫೪) ಸುಮಾರು ೧೫೩ ಪುಟಗಳಷ್ಟು ಕರ್ನಾಟಕ, ಮದ್ರಾಸ್ ಮತ್ತು ಮಹಾರಾಷ್ಟ್ರಗಳು ಸೇರಿದಂತೆ ಅವುಗಳ ಸಾಮಾಜಿಕ, ರಾಜಕೀಯ ಮತ್ತು ರಾಜ ಮಹಾರಾಜರುಗಳ ಬಗ್ಗೆ ಅನೇಕ ವಿಚಾರಗಳ ಉಲ್ಲೇಖವಿದೆ. ಇದಲ್ಲದೆ ನಿಕೊಲೊ ಮನೂಚಿ ಸೇರಿದಂತೆ ಹಲವಾರು ಛಾಯಾಚಿತ್ರಗಳನ್ನು ಒದಗಿಸಲಾಗಿದೆ. ಔರಂಗಜೇಬನ ಆಳ್ವಿಕೆಯ ಬಗ್ಗೆ ಸಮಗ್ರ ಮಾಹಿತಿ ಲಭ್ಯವಿದೆ.

‘ಪ್ರವಾಸಿ ಕಂಡ ಇಂಡಿಯಾ’ ಏಳನೆಯ ಸಂಪುಟದಲ್ಲಿ ಸುಮಾರು ಕ್ರಿ.ಶ. ೧೬೦೮ ರಿಂದ ೧೬೮೬ರವರೆಗಿನ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿದ ಹತ್ತು ಮಂದಿ ವಿದೇಶಿ ಪ್ರವಾಸಿಗರ ಕಥನಗಳ ಅನುವಾದ ಸಂಗ್ರಹವಾಗಿದೆ. ಹಾಗೂ ಅಲ್ಲಲ್ಲಿ ಕಂಡು ಬಂದಿರುವ ತಪ್ಪುಗಳನ್ನು ತಿದ್ದಿ ಓದುಗರಿಗೆ ಉಪಯುಕ್ತವಾಗುವಂತೆ ಮಾಡಿದ್ದಾರೆ.

ಕಾದಂಬರಿಕಾರರಾಗಿ ಎಚ್.ಎಲ್. ನಾಗೇಗೌಡರು

ನಾಗೇಗೌಡರು ತಮ್ಮ ಕಾದಂಬರಿಗಳಲ್ಲಿ ಗ್ರಾಮೀಣ ಬದುಕಿನ ಚಿತ್ರಗಳನ್ನೇ ಬಳಸಿಕೊಂಡಿದ್ದಾರೆ. ಹಳ್ಳಿಯೊಂದರ ಮಣ್ಣಿನ ಮಗನಾಗಿ ಬೆಳೆದಿರುವ ಕಾದಂಬರಿಕಾರರಿಗೆ ಸಹಜವಾಗಿ ಆ ನೆಲದ ಗುಣವನ್ನು ಕಾದಂಬರಿಗಳಲ್ಲಿ ಪ್ರತಿಬಿಂಬಿಸುವ ಆಸೆ. ಕಂಡು ಕೇಳಿದ, ಅನುಭವಿಸಿದ ಘಟನೆಗಳು ಪೂರ್ಣವಾಗಿ ಕೃತಿಗಿಳಿದಿದೆ. ಜಾನಪದ ವಿದ್ವಾಂಸರೂ ಆದ ಇವರು ಜನಪದಗೀತೆ, ಗಾದೆ, ಐತಿಹ್ಯಗಳನ್ನು ಹೇರಳವಾಗಿ ಬಳಸಿಕೊಂಡಿದ್ದಾರೆ. ಕಾದಂಬರಿಗಳಲ್ಲಿ ಮೂಡಿಬರುವ ಭಾಷೆ ಬಯಲು ಸೀಮೆಯ ಜನರ ಆಡುಭಾಷೆ. ಇದು ಉದ್ದೇಶಿತವಾಗಿ ಬಳಕೆಯಾಗದೆ ವಸ್ತುವಿಗೆ ಅನುಗುಣವೆಂಬಂತೆ ಸಹಜವಾಗಿ ನಯ ನಾಜೂಕುಗಳಿಲ್ಲದೆ ಬಂದುದಾಗಿದೆ. ನಾಗೇಗೌಡರು ಒಬ್ಬ ಯಶಸ್ವಿ ಕಾದಂಬರಿಕಾರರೂ ಹೌದು.

ದೊಡ್ಡಮನೆ

'ದೊಡ್ಡಮನೆ' ಕಾದಂಬರಿ ಅವಿಭಕ್ತ ಕುಟುಂಬವೊಂದು ಒಡೆದು ಪಾಲಾಗುವ ವಸ್ತುವುಳ್ಳದ್ದು. ಮೂರು ತಲೆಮಾರುಗಳ ಜೀವನವನ್ನು ವಿಸ್ತಾರವಾಗಿ ಚಿತ್ರಿಸ ಹೊರಟಿರುವ ಈ ಕಾದಂಬರಿಯ ದೀರ್ಘವರ್ಣನೆ ಪ್ರಾರಂಭದಲ್ಲಿ ಮಂದಗತಿಯಲ್ಲಿ, ಬರುಬರುತ್ತಾ ತನ್ನ ವೇಗವನ್ನು ಹೆಚ್ಚಿಸಿಕೊಂಡು ಕೊನೆಕೊನೆಗೆ ಅತಿ ಕ್ಷಿಪ್ರದಲ್ಲಿ ಮುಕ್ತಾಯವಾಗುತ್ತದೆ. ಮೂರು ತಲೆಮಾರುಗಳ ಜೀವನವನ್ನು ಚಿತ್ರಿಸುವ ಬದಲು ಈ ಕಾದಂಬರಿಯಲ್ಲಿ ಕೇವಲ ಮಧ್ಯದ ತಲೆಮಾರನ್ನು ಚಿತ್ರಿಸುತ್ತಾ ಮೊದಲ ಮತ್ತು ಕೊನೆಯ ತಲೆಮಾರುಗಳನ್ನು ಕುರಿತ ಸ್ವಲ್ಪ ವಿವರಗಳು ಮಾತ್ರ ಸಿಗುತ್ತವೆ.

ದೊಡ್ಡಮನೆ ನಂಜೇಗೌಡರದು ಅವಿಭಕ್ತ ಕುಟುಂಬ. ಸುತ್ತಮುತ್ತೆಲ್ಲಾ 'ದೊಡ್ಡಮನೆ' 'ದೊಡ್ಡಗುಣ' ಎಂಬ ಗೌರವವನ್ನು ಅವರು ಪಡೆದಿರುತ್ತಾರೆ. ದಾಯಾದಿಯಾದ ಮುದ್ದೇಗೌಡರಿಗೆ ಇದನ್ನು ಸಹಿಸಲಾಗದೇ ದೊಡ್ಡಮನೆಯನ್ನು ಚಿಕ್ಕಮನೆಯಾಗಿಸಲು ಪಿತೂರಿ ಮಾಡುತ್ತಿರುತ್ತಾನೆ. ಆದರೆ ಒಂದು ಒಳ್ಳೆ ಗಳಿಗೆಯಲ್ಲಿ ನಂಜೆಗೌಡರು ಮುದ್ದೇಗೌಡರನ್ನು ಬೇಡಿಕೊಂಡು ತಮ್ಮತಮ್ಮಲ್ಲಿ ಇದ್ದ ವಿಷಭಾವನೆಯನ್ನು ತೊಡೆದು ಹಾಕುತ್ತಾರೆ. ಇಬ್ಬರೂ ಕಾಲವಾದ ಅನಂತರ ಅವರ ಮಕ್ಕಳಲ್ಲಿ ವಿಷಭಾವನೆ ಮುಂದುವರಿಯುತ್ತದೆ. ಮುದ್ದೇಗೌಡರ ಮಗ ರಂಗೇಗೌಡ ಅಸೂಯೆ ಮತ್ತು ಕೀಳುತನದಿಂದ ಊರಿಗೆ ಮತ್ತು ದೊಡ್ಡಮನೆ ಲಿಂಗೇಗೌಡರಿಗೆ ಪೀಡಕನಾಗುತ್ತಾನೆ. ಇವರ ಪಿತೂರಿಯಿಂದ ದೊಡ್ಡಮನೆ ಒಡೆದು ಚಿಕ್ಕಮನೆಯಾಗುತ್ತದೆ. ಲಿಂಗೇಗೌಡ ಮತ್ತು ರಂಗೇಗೌಡ ಇಬ್ಬರ ಮೇಲೂ ಕೊಲೆ ಆಪಾದನೆ ಬರುತ್ತದೆ. ಕೊನೆಗೆ ದೊಡ್ಡಮನೆ ಘನತೆ ಗೌರವವನ್ನು ಲಿಂಗೇಗೌಡನ ಮಗ 'ನಾಗು' ಎತ್ತಿ ಹಿಡಿಯುತ್ತಾನೆಂಬ ಆಶಾಭಾವನೆಯಿಂದ ಕಾದಂಬರಿ ಕೊನೆಯಾಗುತ್ತದೆ.

ಈ ಕಾದಂಬರಿಯ ಕೇಂದ್ರ ವ್ಯಕ್ತಿ ಲಿಂಗೇಗೌಡ. ಮಿಕ್ಕೆಲ್ಲಾ ಪಾತ್ರಗಳಿಗೂ ಅವುಗಳದ್ದೇ ಆದ ಬೆಳವಣಿಗೆ ಸಾಧ್ಯತೆಯಿದ್ದರೂ ಕಾದಂಬರಿಕಾರರು ಲಿಂಗೇಗೌಡರ ಮುಂದೆ ಅವುಗಳನ್ನು ಕುಬ್ಜವಾಗಿಸುತ್ತಾರೆ. ಆರಂಭದಲ್ಲಿ ಚೆಲ್ಲು ಚೆಲ್ಲಾಗಿ ಆಡಿಕೊಂಡಿದ್ದ ಹುಡುಗ ಬರುಬರುತ್ತಾ ಗಂಭೀರವಾಗಿ ದೊಡ್ಡಮನೆಯ ಯಜಮಾನಿಕೆ ವಹಿಸಿಕೊಂಡು ಕೊನೆಗೆ ನನ್ನೂರಿನ ರಾಜನಾಗಿ ಮೆರೆದ. ದೊಡ್ಡಮನೆಯ ಯಜಮಾನಿಕೆ ವಹಿಸಿಕೊಳ್ಳುವ ತಾಕತ್ತನ್ನು ಅವನು ಮೊದಲೇ ತೋರಿಸಿದ್ದು, ತನ್ನ ಮತ್ತು ರಂಗೇಗೌಡನ ಜಗಳದಲ್ಲಿ. "ಇದೊಂದೇ ಮನೆ ನಮ್ಮ ದೊಡ್ಡಮನೆ ಅಂತ ತಿಳ್ಕೊಂಡೇನೋ! ನಮ್ಮಪ್ಪನಿಗೆ ನಾನು ಹುಟ್ಟಿದ್ರೆ ಇನ್ನೊಂದು ಸೀಮೆ ಹಂಚಿನ ಮನೆಕಟ್ಟಿ ನಮ್ಮಪ್ಪನ ಹೆಸರನ್ನೂ ನಮ್ಮ ಚಿಕ್ಕಪ್ಪದೀರ ಹೆಸರನ್ನು ಮೆರುಸ್ತೀನಿ ಕಣೋ! ದೊಡ್ಡಮನೆ! ದೊಡ್ಡಮನೆ! ಅಂತ ಸುತ್ತ ನಾಕಳ್ಳಿ ಅಲ್ಲ ನಾಡೇ ಅನ್ನಬೇಕು! ಹಂಗೆ ನಾನು ಮಾಡ್ದೇ ಇದ್ರೆ ನಮ್ಮಪ್ಪನಿಗುಟ್ಟಿದೋನೇ ಅಲ್ಲ" ಎಂದು ಸಿಟ್ಟಿನ ಭರದಲ್ಲಿ ನುಡಿಯುವುದನ್ನು ನೋಡಿದರೆ ಅವನಲ್ಲಿ ಛಲ ಎದ್ದು ಕಾಣುತ್ತದೆ. ಈ ಜಗಳ ರಂಗೇಗೌಡ - ಲಿಂಗೇಗೌಡರಿಬ್ಬರ ಸ್ವಭಾವದಲ್ಲಿ ಇರುವ ಭಿನ್ನತೆಯನ್ನು ಸೂಚಿಸುವುದರ ಜೊತೆಗೆ ಇದೇ ಕಾದಂಬರಿಯ ಪ್ರಮುಖ ಕ್ರಿಯೆಯಾಗಿ ಮುಂದುವರಿಯುತ್ತದೆ.

ಈ ಕಾದಂಬರಿಯನ್ನು ಸಾಹಿತ್ಯಿಕ ದೃಷ್ಟಿಯಿಂದ ನೋಡುವುದಲ್ಲದೆ ಸಾಂಸ್ಕೃತಿಕವಾಗಿಯೂ ನೋಡಬೇಕಾಗುತ್ತದೆ. ಇಲ್ಲಿ ಬರುವ ಹಬ್ಬಗಳ ಆಚರಣೆ, ದೇವರುಗಳ ಆರಾಧನೆ, ಜಾತ್ರೆ ಮುಂತಾದುವುಗಳ ವಿವರಗಳು ಕಳೆದು ಹೋದ ನಮ್ಮ ಸಂಸ್ಕೃತಿಯ ಪುನರ್‌ಸೃಷ್ಟಿಗೆ ಸಹಾಯಕವಾಗುತ್ತದೆ. ಈ ದೃಷ್ಟಿಯಿಂದ 'ದೊಡ್ಡಮನೆ' ಅಂಥ ಸಂಸ್ಕೃತಿಯನ್ನು ತಿಳಿಯಲು ಈ ಕೃತಿ ದೊಡ್ಡ ಉಗ್ರಾಣ. ಆದ್ದರಿಂದ ಈ ಕಾದಂಬರಿ ಇತಿಹಾಸಕಾರರಿಗೆ ಸಮಾಜಶಾಸ್ತ್ರಜ್ಞರಿಗೆ, ಅರ್ಥಶಾಸ್ತ್ರಜ್ಞರಿಗೆ ಅನೇಕ ವಿಷಯಗಳನ್ನು ತಿಳಿಸಿ ಕೊಡುವಲ್ಲಿ ಸಫಲವಾಗುತ್ತದೆ.

'ಸೊನ್ನೆಯಿಂದ ಸೊನ್ನೆಗೆ'

'ಸೊನ್ನೆಯಿಂದ ಸೊನ್ನೆಗೆ' ನಾಗೇಗೌಡರ ಎರಡನೆಯ ಕಾದಂಬರಿ. ಜನಪದ ಕಥೆಯೊಂದರ ಆಶಯವನ್ನು ಈ ಕಾದಂಬರಿ ಹೋಲುತ್ತದೆ. ಇಲ್ಲಿ ಪ್ರಧಾನವಾಗಿರುವುದು ಶಾಸ್ತ್ರ, ಶಕುನಗಳ ನಂಬಿಕೆ ಹಾಗೂ ಕೆಟ್ಟವರಿಗೆ ಕೊನೆಗೂ ಕೆಟ್ಟದ್ದೇ ಆಗುತ್ತದೆ, ಒಳ್ಳೆಯವರಿಗೆ ಒಳ್ಳೆಯದಾಗುತ್ತದೆಯೆಂಬ ನೀತಿ. ಇಂಥ ಮನಸ್ಥಿತಿಯ ಹಿನ್ನೆಲೆಯಲ್ಲಿ ವಿವೇಚಿಸುವಾಗ ಇದನ್ನು ಒಂದು ಕಾದಂಬರಿಯಾಗಿ ವಿಸ್ತರಿಸದೆ ನೀಳ್ಗತೆಯಾಗಿ ಹೇಳಬಹುದಿತ್ತು ಎನ್ನಿಸುತ್ತದೆ. ನಾಗೇಗೌಡರು ಈ ಕಾದಂಬರಿಯಲ್ಲಿಯೂ ಜನಪದ ಸಂಸ್ಕೃತಿಯ ಚಿತ್ರಣವನ್ನು ಸಮೃದ್ಧವಾಗಿ ಕಟ್ಟಿಕೊಡುತ್ತಾರೆ. ತಾವು ಕಂಡುಂಡ ಗ್ರಾಮೀಣ ಬದುಕನ್ನು ಅತ್ಯಂತ ಲವಲವಿಕೆಯಿಂದ ರಸವತ್ತಾಗಿ ವರ್ಣಿಸುವ ಕಲೆ ಅವರಿಗೆ ಸಿದ್ಧಿಸಿದೆ.

ಮೈಲಾರದ ಮೂಲ ಪುರುಷರ ಚರಿತ್ರೆಯ ಮೂಲಕ ತೊಡಗುವ ಕಾದಂಬರಿ ಊರದೇವರ ಒಕ್ಕಲಾಗದಿದ್ದ, ಊರಿನ ಹುಟ್ಟುಗಾರನಾಗದಿದ್ದ ಬಾಜಗಾರ ಚನ್ನಯ್ಯನ ದುರಾಸೆಯ ದುಷ್ಫಲವಾಗಿ ಶಾಪಕ್ಕೊಳಗಾಗಿ, ಆತನ ವಂಶವೇ ನಿರ್ನಾಮವಾಗುವುದರೊಂದಿಗೆ ಮುಗಿಯುತ್ತದೆ. ನಮ್ಮ ಜನಪದರಿಗೆ ದೈವಭಕ್ತಿ ಮತ್ತು ಗುರುಹಿರಿಯರಲ್ಲಿದ್ದ ನಂಬಿಕೆ ಹಾಗೂ ಬದುಕಿನಲ್ಲಿ ನೇಮ ನಿಯತ್ತುಗಳೇ ಪರಮ ಪ್ರಧಾನವಾದಂಥವು ಎಂಬುದೇ ಕಾದಂಬರಿಯ ನೆಲೆಗಟ್ಟು.

ನಮ್ಮ ಹಳ್ಳಿಗರ ಬದುಕಿನ ಇತಿಮಿತಿಗಳನ್ನು ಸಮಯ ಸಂದರ್ಭ ಒದಗಿದಾಗ ಯಾವೆಲ್ಲ ತಂತ್ರ ಮಂತ್ರ ಹೂಡಿ, ಹೇಗೆ ನಾಗರಿಕರಾಗಿ ಬಾಳಲು ಹೆಣಗುತ್ತಾರೆ ಎಂಬುದನ್ನು ನಾಗೇಗೌಡರು ಈ ಕಾದಂಬರಿಯಲ್ಲಿ ಸೊಗಸಾಗಿ ಚಿತ್ರಿಸುತ್ತಾರೆ.

"ಭೂಮಿಗೆ ಬಂದ ಗಂಧರ್ವ"

ನಾಗೇಗೌಡರ 'ಭೂಮಿಗೆ ಬಂದ ಗಂಧರ್ವ' ಕಾದಂಬರಿಯ ನಾಯಕ ಓರ್ವ ಸಂಗೀತಗಾರ. ಕನ್ನಡದಲ್ಲಿ ಸಂಗೀತಗಾರರನ್ನೇ ನಾಯಕರನ್ನಾಗಿ ರಚಿಸಿದ ಪ್ರಮುಖ ಕಾದಂಬರಿಕಾರರು ಅ.ನ.ಕೃ. ಹಾಗೂ ತ.ರಾ.ಸು. ಅನಂತರದಲ್ಲಿ ಪ್ರಸ್ತುತ ಕಾದಂಬರಿ ಬೆಳಕು ಕಂಡಿದೆ. ಈ ಕಾದಂಬರಿಯ ಕೆಂಪೇಗೌಡನ ವ್ಯಕ್ತಿತ್ವದಲ್ಲಿ ಕಂಡುಬರುವ ಮೂರು ಮುಖ್ಯ ಅಂಶಗಳೆಂದರೆ ಶ್ರದ್ಧೆ, ಸಂಯಮ, ನಿರ್ಲಿಪ್ತತೆ. ಆತನ ಶ್ರದ್ಧೆ ಮೊದಲಿಂದ ಕೊನೆಯವರೆಗೂ ಏಕಾಗ್ರವಾಗಿರುತ್ತದೆ. ಕಾದಂಬರಿಕಾರರು ತಮ್ಮ ನಾಯಕನ ಬಗೆಗಿನ ಅಭಿಮಾನದಿಂದ ಆತ ಪವಾಡಪುರುಷ ಎಂಬ ಮಟ್ಟಕ್ಕೂ ಏರಿಸುತ್ತಾರೆ. ಈ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ತಂಬೂರಿ ತಾನೇ ತಾನಾಗಿ ನಾದ ಹೊಮ್ಮುವುದು, ಅಪ್ಪಾಜಾಚಾರ್ಯರ ಮಗನಿಗೆ ಸಂಗೀತದಿಂದಲೇ ಖಾಯಿಲೆ ಗುಣವಾಗುವುದು - ಇಂಥಹ ಪವಾಡಗಳು ನಡೆಯುತ್ತವೆ!

ಚಾರಿತ್ರಿಕ ವಸ್ತುವನ್ನು ಕಾದಂಬರಿಗೆ ಆರಿಸಿರುವುದರಿಂದಾಗಿ ಇಲ್ಲಿ ಹಲವು ಪಾತ್ರಗಳು ಕಾದಂಬರಿಗೆ ಅನಿವಾರ್ಯವಾಗಿಲ್ಲದಿದ್ದರೂ ಬರುತ್ತವೆ. ಆದರೆ ಈ ಪಾತ್ರಗಳು ಚರಿತ್ರೆಯಲ್ಲಿ ಪ್ರಸಿದ್ಧಿ ಹೊಂದಿದವುಗಳು. ಕಾದಂಬರಿಯಲ್ಲಿ ಇವುಗಳಿಗೆ ಸ್ವತಂತ್ರ ಅಸ್ತಿತ್ವ ಇರುವುದಿಲ್ಲ. ಉದಾಹರಣೆಗೆ ಬಿ. ಪುಟ್ಟಸ್ವಾಮಯ್ಯ, ವೀರಣ್ಣಗೌಡ ಈ ಪಾತ್ರಗಳು ಕಾದಂಬರಿಯಲ್ಲಿ ಕೇವಲ ಒಂದು ಕ್ಷಣ ಹಾದುಹೋಗುವ ಪಾತ್ರಗಳಾಗಿ ಮಾತ್ರ ಇವೆ.

ಈ ಕಾದಂಬರಿಯನ್ನು ಕುರಿತು ಪ್ರಸಿದ್ಧ ವಿಮರ್ಶಕರಾದ ಪ್ರೊ. ವಿ.ಕೃ. ಗೋಕಾಕ ಅವರು ಹೀಗೆ ಬರೆಯುತ್ತಾರೆ. "ಜಾನಪದ ಸಾಹಿತ್ಯದಲ್ಲಿ ಒಂದು ಧುರೀಣತ್ವವನ್ನು ವಹಿಸಿ ಜನಪದ ಜೀವನವನ್ನು ಸಾಕ್ಷಿರೂಪವಾಗಿ ನೋಡುವಂಥ ಪ್ರತಿಭಾಂಶವುಳ್ಳ ನಾಗೇಗೌಡರು ಭೈರವಿ ಕೆಂಪೇಗೌಡರೆಂಬ ಖ್ಯಾತ ಸಂಗೀತಕಾರರ ಜೀವನದ ಸರ್ವಸ್ವಾರಸ್ಯವನ್ನು 'ಭೂಮಿಗೆ ಬಂದ ಗಂಧರ್ವ' ಎಂಬ ಶ್ರೇಷ್ಠ ಕಾದಂಬರಿಯಲ್ಲಿ ಒದಗಿಸಿಕೊಟ್ಟು, ಕನ್ನಡ ನಾಡಿನ ಮನದಲ್ಲಿ ಶಾಶ್ವತವಾಗಿ ಇರುವಂತೆ ಮಾಡಿದ್ದಾರೆ."

ಇತರ ಕೃತಿಗಳು

ಸರೋಜಿನಿದೇವಿ (ಜೀವನ ಚರಿತ್ರೆ)

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಯಾವುದೇ ಪ್ರಸಿದ್ಧ ವ್ಯಕ್ತಿಯ ಬದುಕು-ಬರಹದ ಸಂಪೂರ್ಣ ವಿವರ ನೀಡುವ ಕೃತಿಗಳು ವಿರಳ. ಆದರೆ ನಾಗೇಗೌಡರ 'ಸರೋಜಿನಿದೇವಿ' ಎಂಬ ಕೃತಿಯು ಮೇಲಿನ ಹೇಳಿಕೆಗೆ ಹೊರತಾಗಿದೆ.

ಸರೋಜಿನಿದೇವಿ ಈ ಕೃತಿಯ ಕೇಂದ್ರ ವ್ಯಕ್ತಿ. ಆದರೂ ಗಾಂಧೀಜಿ, ಕಸ್ತೂರಿಬಾ, ನೆಹರೂ ಮೊದಲಾದ ಪಾತ್ರದ ಒಂದೊಂದು ಮುಖವನ್ನು ಇಲ್ಲಿ ಕಾಣಬಹುದು. ಕೃತಿಕಾರರಿಗೆ ಸರೋಜಿನಿಯ ಜೀವನವಷ್ಟೇ ಮುಖ್ಯ ಅಲ್ಲ, ಪರಿಸರವೂ ಮುಖ್ಯವಾಗಿದೆ. ಆದ್ದರಿಂದಲೇ ಇವರನ್ನು ಪರಿಸರದ ಮಧ್ಯೆ ನಿಲ್ಲಿಸಿ, ಇವರು ಹೇಗೆ, ಯಾವ ರೀತಿಯಲ್ಲಿ ಬದುಕಿಗೆ ಸ್ಪಂದಿಸಬಲ್ಲವರಾಗಿದ್ದರು, ಅವರ ಆ ಸ್ಪಂದನವಾದರೂ ಯಾವ ಬಗೆಯದು ಎಂಬ ವ್ಯಕ್ತಿ ವಿಶ್ಲೇಷಣೆಯ ವಿಮರ್ಶನ ಚತುರತೆಯೂ ಈ ಕೃತಿಯಲ್ಲಿ ಇದೆ.

ನಾಗೇಗೌಡರು ಕೃತಿಗೆ ತಮ್ಮದೇ ಆದ ಚೌಕಟ್ಟನ್ನು ಬಳಸಿದ್ದಾರೆ. ಸರೋಜಿನಿಯವರು ಹುಟ್ಟುವುದಕ್ಕೆ ಮೊದಲು ಅವರ ತಂದೆ-ತಾಯಿ ವಿಚಾರ, ಸರೋಜಿನಿ ಹುಟ್ಟುವಾಗ ಅವರಿದ್ದ ಪರಿಸ್ಥಿತಿ, ಸರೋಜಿನಿಯವರ ಬೆಳವಣಿಗೆ, ಪ್ರತಿಭೆ, ಪ್ರೇಮ, ವಿವಾಹ, ದಾಂಪತ್ಯ-ಹೀಗೆ ಹಂತ ಹಂತವಾಗಿಯೇ ವಸ್ತುವನ್ನು ನಿರೂಪಿಸುತ್ತಾ ಅವಶ್ಯಕವೆನ್ನುವಲ್ಲಿ ಸ್ವಾರಸ್ಯ ಘಟನೆಗಳನ್ನು ಬೆಸೆಯುತ್ತಾ ಸಾಗಿರುವ ಕೃತಿಕಾರರ ಜಾಣ್ಮೆ ಮೆಚ್ಚುವಂಥದ್ದು. ಅಲ್ಲದೆ ಪ್ರತಿಯೊಂದು ಹಂತದ ನಿರೂಪಣೆಗೂ ಪ್ರತ್ಯೇಕವಾಗಿ 'ಶಿರೋನಾಮೆ'ಯನ್ನು ಬಳಸಿದ್ದಾರೆ. ಸರೋಜಿನಿಯವರ ಹುಟ್ಟಿನಿಂದ ಆರಂಭಗೊಂಡ ಕೃತಿ ಸಾವಿನೊಂದಿಗೆ ಮುಕ್ತಾಯವಾಗುವುದರಿಂದ 'ಸರೋಜಿನಿದೇವಿ' ಎಂಬ ಕೃತಿಯ ಹೆಸರೇ ಕೃತಿಯ ಬಂಧವನ್ನು ಕಾಯ್ದುಕೊಂಡಿದೆ.

ನನ್ನೂರು (ಗ್ರಾಮೀಣ ಚಿತ್ರಣ)

'ನನ್ನೂರು' ಕಳೆದುಹೋದ ಜನಪದ ಬದುಕನ್ನು ಚಿತ್ರಿಸುವ ಗದ್ಯಕೃತಿ. ಸಂಕಲನದ ಎಲ್ಲಾ ಪ್ರಬಂಧಗಳನ್ನು ಎರಡು ಗುಂಪುಗಳಲ್ಲಿ ನೋಡಬಹುದು. ಹಬ್ಬಗಳು ಅವುಗಳ ಆಚರಣೆ, ಸಂಪ್ರದಾಯಗಳು ಹಾಗೂ ವ್ಯಕ್ತಿಯ ಚಿತ್ರಗಳು. ಇಲ್ಲಿ ಬರುವ ಪ್ರತಿ ಸನ್ನಿವೇಶ, ಘಟನೆಗಳ ಅಭಿವ್ಯಕ್ತಿಯಲ್ಲಿ ತನ್ಮಯತೆ ಮತ್ತು ಉತ್ಸಾಹವನ್ನು ಗುರುತಿಸಬಹುದು. ಈ ಉತ್ಸಾಹವು ಹಲವು ಬಾರಿ ಉತ್ಪ್ರೇಕ್ಷೆಗೂ ಎಡೆ ಮಾಡಿಕೊಟ್ಟಿದೆ.

ಮೊದಲ ಅಧ್ಯಾಯದಲ್ಲಿ ನನ್ನೂರಿನ ಭೌಗೋಳಿಕ ಸ್ಥಳ ಮತ್ತು ಐತಿಹ್ಯಗಳ ವಿವರ ಪೂರ್ಣ ಚಿತ್ರಗಳು ಬರುತ್ತವೆ. ಇಲ್ಲಿನ ಶೈಲಿಯಲ್ಲಿ ಸಾಹಿತ್ಯಕ ಹಾಗೂ ಆಡುಮಾತಿನ

ಮಿಶ್ರಣವಿದ್ದು ಬರವಣಿಗೆ ಮೊನಚಾಗಿದೆ. ಕೃತಿಯ ಪೂರ್ವಾರ್ಧದಲ್ಲಿ ಸೋಬಾನೆ ಚಿಕ್ಕಮ್ಮ ಹಾಡುತ್ತಿದ್ದ ಹಾಡುಗಳನ್ನು ಯಥೇಚ್ಛವಾಗಿ ಲೇಖಕರು ಬಳಸಿಕೊಂಡಿದ್ದಾರೆ. ಸಂಕಲನದ ಉದ್ದಕ್ಕೂ ವಿವರಣೆಗಳ ಮಧ್ಯೆ ಹಲವಾರು ಗಾದೆಯ ಮಾತುಗಳನ್ನು ಬಳಸಿಕೊಂಡಿರುವುದು ಅಭಿವ್ಯಕ್ತಿಗೆ ಜೀವ ತಂದಿದೆ. ಇಲ್ಲಿನ ಮತ್ತೊಂದು ಅಂಶವೆಂದರೆ ನಿರಾಯಾಸವಾಗಿ ಹುಟ್ಟುವ ಹಾಸ್ಯ. ಕೃತಿಯ ಉಲ್ಲಾಸಕರ ಓದಿಗೆ ಇದು ಕಾರಣವಾಗಿದೆ.

ಹಾಗೆಯೇ ಹಲವಾರು ಹೃದಯಸ್ಪರ್ಶಿ ಚಿತ್ರಗಳು ಇವೆ. ನಿಂತ ವಿವಾಹವನ್ನು ನೆರವೇರಿಸುವ ಗೌಡರ ಘನತೆ, ದಾಸಪ್ಪ ಮತ್ತು ಅವನ ಕುಟುಂಬದ ಮೈಸೂರು ದಸರಾದಲ್ಲಿನ ಪ್ರಸಂಗಗಳು ಉತ್ತಮ ಉದಾಹರಣೆಗಳು. ಸಾಹಿತ್ಯವಾಗಿ ಮನಸೆಳೆಯಬಲ್ಲ ಭಾಗಗಳಲ್ಲದೆ, ಕೃತಿಯಲ್ಲಿ ಬಳಕೆಗೊಂಡಿರುವ ಜನಪದ ಬೈಗಳುಗಳು, ಗಾದೆ ಮಾತುಗಳು, ಬರವಣಿಗೆಯ ರೀತಿಗೆ ಅನನ್ಯ ಸಹಜತೆಯನ್ನು ತಂದು ಕೊಟ್ಟಿದೆ. ರಾಷ್ಟ್ರಕವಿ ಕುವೆಂಪು ಈ ಪುಸ್ತಕಕ್ಕೆ 'ಹೊನ್ನುಡಿ' ಬರೆದಿದ್ದಾರೆ.

ಬೆಟ್ಟದಿಂದ ಬಟ್ಟಲಿಗೆ (ಕಾಫಿಯ ಬಗ್ಗೆ ಕಥೆ) ೧೯೬೯

ನಾಗೇಗೌಡರು ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದಾಗ "ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್"ನ ಅಧ್ಯಕ್ಷರೂ ಆಗಿದ್ದರು. ಆಗ ಅದರ ವಜ್ರಮಹೋತ್ಸವ ಸಂದರ್ಭದಲ್ಲಿ ಪತ್ರಿಕೆಗಳ ವಿಶೇಷ ಸಂಚಿಕೆಗೆ ಒಂದು ಲೇಖನ ಬರೆದರು. ಅದಕ್ಕೆ 'ಬೆಟ್ಟದಿಂದ ಬಟ್ಟಲಿಗೆ' ಎಂದು ಹೆಸರಿಟ್ಟರು. ಬಳಿಕ ಮೂರು-ನಾಲ್ಕು ವರ್ಷಗಳ ಸತತ ಶ್ರಮದಿಂದ ಕಾಫಿಯನ್ನು ಕುರಿತು 'ಬೆಟ್ಟದಿಂದ ಬಟ್ಟಲಿಗೆ' ಎಂಬ ಕೃತಿಯನ್ನು ರಚನೆ ಮಾಡಿದರು.

ನಾಗೇಗೌಡರಿಗೆ ಕಾಫಿ ತೋಟಗಳ ಪ್ರತ್ಯಕ್ಷ ಪರಿಚಯ, ಜೊತೆಗೆ ರಾಜ್ಯ ಲೇಬರ್ ಕಮೀಷನರ್ ಆಗಿದ್ದಾಗ ಕಾಫಿ ತೋಟಗಾರರ, ತೋಟದ ಕೆಲಸಗಾರರ ಸಮಸ್ಯೆಗಳ ತಿಳುವಳಿಕೆ ಲಭಿಸಿತ್ತು. ಪಾಶ್ಚಾತ್ಯ ಕಾಫಿ ತೋಟಗಾರರೂ, ಇತರರೂ ಬರೆದಿರುವ ಅನೇಕ ಇಂಗ್ಲಿಷ್ ಗ್ರಂಥಗಳಿಂದ ವಿಷಯ ಸಂಗ್ರಹ ಮಾಡಿ ಇಂಥಹ ಉತ್ತಮ ಗ್ರಂಥವನ್ನು ರಚಿಸಲು ಅವರಿಗೆ ಸಾಧ್ಯವಾಗಿದೆ. ಗ್ರಂಥದ ಮೊದಲ ಹದಿಮೂರು ಅಧ್ಯಾಯಗಳಲ್ಲಿ ಕಾಫಿಯ ಹುಟ್ಟು, ಅದರ ಬೆಳವಣಿಗೆ, ವ್ಯಾಪ್ತಿ ಹಾಗೂ ವೈಶಿಷ್ಟ್ಯಗಳನ್ನು ಅಂಕಿ ಅಂಶಗಳೊಡನೆ ತಿಳಿಯಾದ ಕನ್ನಡದಲ್ಲಿ ನಿರೂಪಿಸಲಾಗಿದೆ.

ಫ್ರಾನ್ಸ್ ದೇಶದ ದೊರೆ ಲೂಯಿ ೧೭೧೨ ರಲ್ಲಿ ತನ್ನ ಅರಮನೆಯಲ್ಲಿ ಬೆಳೆಸಿದ ಕಾಫಿ ಗಿಡವೂ, ಅದಕ್ಕೂ ಮುಂಚೆ ಚಿಕ್ಕಮಗಳೂರಿಗೆ ಬಂದ ಕಾಫಿ ಗಿಡವೂ ಒಂದೇ ತಾಯಿಗಿಡದ ತಳಿಗಳಂತೆ. ಬಾಬಾ ಬುಡನ್ ಸಾಹೇಬ ಮೆಕ್ಕಾ ಯಾತ್ರೆ ಮಾಡಿದಾಗ ಅರೇಬಿಯಾದಿಂದ ಇಲ್ಲಿಗೆ ಏಳು ಬೀಜ ತಂದು ಬೆಳೆಸಿ ಕಾಫಿಯುಗವನ್ನು ನಮ್ಮ ನಾಡಿನಲ್ಲಿ ಪ್ರಾರಂಭಿಸಿದ ಸಂಗತಿಯ ವಿಚಾರವನ್ನು ಲೇಖಕರು ಹೇಳಿದ್ದಾರೆ. ಪಾಶ್ಚಾತ್ಯ ಕಾಫಿ

ತೋಟಗಾರರ ಅನುಭವಗಳ ಸಂಗ್ರಹ ತುಂಬ ಸ್ವಾರಸ್ಯವಾಗಿದೆ.

ಖೈದಿಗಳ ಕಥೆಗಳು -೧೯೮೭

ಖೈದಿಗಳ ಕಥೆಗಳು ಸಾಹಿತ್ಯ ಕ್ಷೇತ್ರದಲ್ಲಿ ವಿನೂತನ ಸೃಷ್ಟಿ. ಖೈದಿಗಳನ್ನು ಸಂದರ್ಶಿಸಿ ಅವರ ಮಾತುಗಳನ್ನು ಧ್ವನಿ ಮುದ್ರಣ ಮಾಡಿ ಅವರ ಬದುಕಿನ ಬಗೆ, ಬೇಗೆಯನ್ನು ಓದುಗರ ಮುಂದಿಟ್ಟಿದ್ದಾರೆ. ಇತಂಹ ಪ್ರಯತ್ನ ಕನ್ನಡ ಭಾಷೆಯಲ್ಲೇ ಪ್ರಪ್ರಥಮ ಪ್ರಯೋಗ ಹಾಗೂ ವಿಶಿಷ್ಟ ಕೊಡುಗೆಯಾಗಿದೆ.

ನಾಗೇಗೌಡರ ಖೈದಿಗಳ ಕಥೆಗಳಲ್ಲಿ ಬರುವ ವ್ಯಕ್ತಿಗಳು ಜೀವಂತ ಪಾತ್ರಗಳು. ಅವರೆಲ್ಲರೂ ಹಾಲಿ ಬದುಕಿರುವ ವ್ಯಕ್ತಿಗಳೂ ಹೌದು. ಅವರ ಬಾಯಿಯಿಂದಲೇ ಬಂದ ಅವರ ಜೀವನ ವೃತ್ತಾಂತದ ದಾಖಲೆಯನ್ನು ಈ ಕಿರು ಪುಸ್ತಕದಲ್ಲಿ ಕಾಣುತ್ತೇವೆ.

ಈ ಕೃತಿಯಲ್ಲಿ ಒಟ್ಟು ಆರು ಪ್ರಮುಖ ದಾಖಲೆಗಳಿವೆ. ಉಳಿದ ಹತ್ತು ಪ್ರಕರಣಗಳನ್ನು ಫಿಮೇಲ್ ಜೈಲರ್ ತಮ್ಮ ಹುದ್ದೆಯಲ್ಲಿದ್ದಾಗ ಕಂಡದ್ದನ್ನು ನಿರೂಪಿಸಲಾಗಿದೆ. ಕೃತಿಯನ್ನು ಓದುತ್ತಾ ಹೋದಾಗೆಲ್ಲಾ ಬೇರೊಂದು 'ಪ್ರಪಂಚ'ವನ್ನೇ ಕಂಡಂತೆ ಭಾಸವಾಗುತ್ತದೆ. ಈ ಖೈದಿಗಳು ಎಂತಹ ಮತ್ಸರ, ಈರ್ಷೆ, ದ್ರೋಹ, ಲೈಂಗಿಕತೆ, ಅಪಚಾರ, ಕ್ಷುದ್ರಕಲೆ, ಮೋಸದ ಅಮಾನುಷ ಜಾಲದಲ್ಲೇ ಇದ್ದರೂ ಅವರೂ ಮಾನವರೇ ಆಗಿದ್ದಾರೆ. ತಪ್ಪಿಗೆ ಪಡುವ ಪರಿತಾಪ, ಅಪರಾಧಕ್ಕೆ ಮರುಗಿ ಅನುಭವಿಸುವ ಪಶ್ಚಾತ್ತಾಪ, ತಪ್ಪನ್ನು ಮರೆತು ನವಜೀವನ ಪ್ರಾರಂಭಿಸಬೇಕೆಂಬ ಆಂತರಿಕ ಅಪೇಕ್ಷೆ, ಈ ಗುಣಗಳು ಓದುಗರ ಮನಸ್ಸನ್ನು ಕಲಕುತ್ತವೆ.

'ಜಾನಪದ ಜಗತ್ತು'

ನಾಗೇಗೌಡರ ಸಂಪಾದಕತ್ವದಲ್ಲಿ ಕರ್ನಾಟಕ ಜಾನಪದ ಟ್ರಸ್ಟ್ (ಇತ್ತೀಚೆಗೆ ಕರ್ನಾಟಕ ಜಾನಪದ ಪರಿಷತ್ತು ಆಗಿದೆ) ವತಿಯಿಂದ 'ಜಾನಪದ ಜಗತ್ತು' ಎಂಬ ದ್ವೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ.

ಈ ಪತ್ರಿಕೆಯು ಕರ್ನಾಟಕ ಜಾನಪದಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿಚಾರಗಳನ್ನು ಪ್ರಕಟಿಸುತ್ತಾ ಬಂದಿದೆ. ವರ್ಷದಲ್ಲಿ ಒಂದೆರಡು ಬಾರಿ ವಿಶೇಷ ಸಂಚಿಕೆಗಳನ್ನು ಪ್ರಕಟಿಸುತ್ತಿದೆ. ವಿಶೇಷ ಸಂಚಿಕೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಉಪಯುಕ್ತ ಲೇಖನಗಳನ್ನು ಪ್ರಕಟಿಸುತ್ತಿರುವುದು ವಿಶೇಷ.

ಸಧ್ಯಕ್ಕೆ ಕರ್ನಾಟಕದಲ್ಲಿ ಮಾತ್ರವಲ್ಲ, ದಕ್ಷಿಣ ಭಾರತದಲ್ಲಿ ಜನಪದವನ್ನೇ ಕುರಿತ ಪತ್ರಿಕೆಯೊಂದು ನಿಲ್ಲದೆ ಪ್ರಕಟಗೊಳ್ಳುತ್ತಿದೆ. ಜಾನಪದ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಈ ಪತ್ರಿಕೆ ಬಹಳ ಉಪಯುಕ್ತವಾದುದಾಗಿದೆ. ಇದು ನಾಗೇಗೌಡರ ಮಹತ್ವದ ಕೊಡುಗೆ.

ಜಾನಪದ ಸಂಗ್ರಾಹಕ, ಸಂಶೋಧಕರಾಗಿ

ನಾಗೇಗೌಡರು ತಾವು ಬಿ.ಎಸ್ಸಿ. ಪದವಿ ಓದುತ್ತಿರುವಾಗಲೇ ಜನಪದ ಗೀತೆಯೊಂದನ್ನು ಸಂಗ್ರಹಿಸಿ ಪ್ರಬುದ್ಧ ಕರ್ನಾಟಕ ಪತ್ರಿಕೆಗೆ ಪ್ರಕಟಣೆಗಾಗಿ ಕಳುಹಿಸಿದರು. ಆದರೆ ಆ ಗೀತೆ ಆಗಲೇ ಪ್ರಕಟವಾಗಿದೆಯೆಂದು ಪ್ರಕಟಿಸಲಿಲ್ಲವಂತೆ. ಹುಟ್ಟಿನಿಂದ ರಕ್ತಗತವಾಗಿದ್ದ ಜನಪದ ಸಾಹಿತ್ಯದ ಮೇಲಿನ ಪ್ರೇಮ ಮರುಕಳಿಸಿ ಸಂಗ್ರಹ ಕಾರ್ಯವನ್ನು ಆರಂಭಿಸಿದಾಗ ಹಲವಾರು ವರ್ಷಗಳೇ ಕಳೆದು ಹೋಗಿದ್ದವು. ಅಂದರೆ ೧೯೬೧ ರಿಂದ ಇವರ ಸಂಗ್ರಹ ಕಾರ್ಯ ಆರಂಭವಾಯಿತೆನ್ನಬಹುದು. ಇವರು ಸರ್ಕಾರಿ ಅಧಿಕಾರಿಯಾಗಿ ಗ್ರಾಮೀಣರ ನಿಕಟ ಸಂಪರ್ಕವಿದ್ದುದರಿಂದ ಈ ನಿಟ್ಟಿನಲ್ಲಿ ಅಪಾರ ಕೆಲಸ ಮಾಡಲು ಸಾಧ್ಯವಾಯಿತು. ಹಾಗೂ ಆ ಬಗ್ಗೆ ಇದ್ದ ಅಪಾರ ಕಾಳಜಿಯೇ ಇವರು ಜಾನಪದ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ವಿವಿಧ ಪ್ರಕಾರಗಳಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಲೂ ಸಾಧ್ಯವಾಯಿತು. ಇಂದು ಜಾನಪದವೇ ಅವರ ಉಸಿರಾಗಿದೆ ಎಂದರೆ ಆಶ್ಚರ್ಯವಿಲ್ಲ.

ನಾಗೇಗೌಡರು ನಿವೃತ್ತಿ ಹೊಂದಿದ ಅನಂತರ ಅವರ ಅಭಿನಂದನ ಸಂದರ್ಭದಲ್ಲಿ ಕೊಟ್ಟ ೧,೧೫,೦೦೦ ರೂಪಾಯಿ ಉಡುಗೊರೆ ಹಣವನ್ನು ಬಳಸಿಕೊಂಡು 'ಕರ್ನಾಟಕ ಜಾನಪದ ಟ್ರಸ್ಟ್' ಒಂದನ್ನು (೧೯೭೯) ಆರಂಭಿಸಿದರು. ಆ ಮೂಲಕ ನಾಗೇಗೌಡರು ಜಾನಪದ ಕ್ಷೇತ್ರಕ್ಕೆ ತಮ್ಮನ್ನೇ ಒಪ್ಪಿಸಿಕೊಂಡರು.

'ಜಾನಪದ ಲೋಕ'

ಜಾನಪದ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಗ್ರಾಮೀಣ ಪ್ರದೇಶವೊಂದರಲ್ಲಿ ಗ್ರಾಮೀಣರ ಮಧ್ಯೆಯೇ 'ಜಾನಪದ ಲೋಕ' ಎಂಬ ಸಾಂಸ್ಕೃತಿಕ ಕೇಂದ್ರವನ್ನು ಟ್ರಸ್ಟಿನ ಆಡಳಿತ ಮಂಡಳಿಯ ತೀರ್ಮಾನದಂತೆ - ಬೆಂಗಳೂರಿಗೆ ಸುಮಾರು ೫೨ ಕಿ.ಮೀ. ದೂರದ ರಾಮನಗರದ ಬಳಿ ಬೆಂಗಳೂರು - ಮೈಸೂರು ಹೆದ್ದಾರಿಯ ಪಕ್ಕದಲ್ಲಿ ಹದಿನೈದು ಎಕರೆ ಪ್ರದೇಶದಲ್ಲಿ ಸ್ಥಾಪಿಸಿದ್ದಾರೆ.

ಈ ಕೇಂದ್ರದಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದ್ದು ಸುತ್ತಮುತ್ತಲ ಪ್ರದೇಶಗಳಿಗೆ ಚಿರಪರಿಚಿತವಾಗಿದೆ. ವಾರದಲ್ಲಿ ಎರಡು ಬಾರಿ ಕಲಾಪ್ರದರ್ಶನ ಇರುತ್ತದೆ. ಇದಕ್ಕೆ ಗ್ರಾಮೀಣರನ್ನು ಆಹ್ವಾನಿಸಿ ಅವರಿಂದಲೇ ಕಲಾ ಪ್ರದರ್ಶನ ನಡೆಸುವದರಿಂದ ಅವರ ಪ್ರೀತಿಗೆ ಪಾತ್ರವಾಗಿದೆ.

ಇಲ್ಲಿಯವರೆಗೆ ಸಂಗ್ರಹವಾಗಿರುವ ಸುಮಾರು ಐದು ಸಾವಿರ ವಸ್ತುಗಳನ್ನು ಐದು ವಸ್ತು ಸಂಗ್ರಹಾಲಯಗಳಲ್ಲಿ ಜೋಡಿಸಲಾಗಿದೆ. ೭೦೦-೮೦೦ ಮಂದಿ ಕುಳಿತುಕೊಳ್ಳ ಬಹುದಾದ ಗ್ರೀಕ್ ಮಾದರಿಯ ರಂಗಮಂದಿರವಿದೆ.

"ದೊಡ್ಡಮನೆ" ಎಂಬ ಹೆಸರಿನ ಒಂದು ಮನೆಯಿದ್ದು, ಇದನ್ನು ಹತ್ತು ಸಮಸ್ತರಿಗೆ ಅನುಕೂಲವಾಗಲೆಂದು ಶುಭಕಾರ್ಯಗಳನ್ನು ನೆರವೇರಿಸಲು ಕೊಡಲಾಗುತ್ತಿದೆ. ಇಂತಹ ಶುಭಕಾರ್ಯದಲ್ಲಿ ದೇವರು ತರಲು ಅಥವಾ ಗಂಗಾ ಪೂಜೆ ಇತ್ಯಾದಿಗಳಿಗೆ ಅಗತ್ಯವಾದುದು ಕೆರೆ. ಬೆಂಗಳೂರು ಜಿಲ್ಲಾ ಪರಿಷತ್ತಿನವರು ಜಾನಪದ ಲೋಕದ ಮಧ್ಯೆ ವಿಶಾಲವಾದ ಕೆರೆಯೊಂದನ್ನು ಕಟ್ಟಿಸಿಕೊಟ್ಟಿದ್ದಾರೆ. ಬಹಳ ಅಗತ್ಯವಾಗಿ ಬೇಕಾದ ಊಟದ ವ್ಯವಸ್ಥೆಗೆ 'ಲೋಕರುಚಿ' ಎಂಬ ಉಪಹಾರ ಗೃಹವಿದೆ. ಇಷ್ಟಲ್ಲದೆ ಈ ಜಾನಪದ ಲೋಕದಲ್ಲಿ ಆಗಬೇಕಾಗಿರುವ ಕೆಲಸಗಳ ಪಟ್ಟಿ ಹೀಗಿದೆ :

ಜಿಲ್ಲಾ ಕುಟೀರಗಳು, ವಿಚಾರಗೋಷ್ಠಿ, ಸಭೆ-ಸಮಾರಂಭ ಚಲನಚಿತ್ರ ಪ್ರದರ್ಶನಕ್ಕೆ ಆಡಿಟೋರಿಯಂ, ಹಳ್ಳಿಯ ಹಾಗೂ ಆದಿವಾಸಿ ಮಹಿಳೆಯರ ಹೆಣಿಗೆ, ಚಿತ್ತಾರ, ರಂಗೋಲಿ ಇತ್ಯಾದಿಗಳ ಮತ್ತು ಮಕ್ಕಳ ಆಟಪಾಠಗಳ ವಿಶೇಷ ವ್ಯವಸ್ಥೆಗಾಗಿ ಮಹಿಳೆಯರ ಮತ್ತು ಮಕ್ಕಳ ವೇದಿಕೆಗಳು ಆಗಬೇಕಿದೆ. ಜಾನಪದಕ್ಕೆ ಸಂಬಂಧಿಸಿದ ದೇಶವಿದೇಶಗಳ ಸಮಗ್ರ ಗ್ರಂಥಗಳು, ಧ್ವನಿಮುದ್ರಿಕೆಗಳು, ವೀಡಿಯೋ ಚಿತ್ರಗಳು, ಸ್ಲೈಡ್‌ಗಳು, ಸಾಕ್ಷ್ಯಚಿತ್ರಗಳು, ಇತ್ಯಾದಿಗಳ ಬೃಹತ್ ಸಂಗ್ರಹಕ್ಕಾಗಿ ಒಂದು ಸಾಂಸ್ಕೃತಿಕ ಭಂಡಾರ ಆಗುವುದಿದೆ. ಜಾನಪದದ ವಿವಿಧ ಶಾಖೆಗಳಲ್ಲಿ ಸಂಶೋಧನೆ ಕೈಗೊಳ್ಳುವವರಿಗೆ ಸೂಕ್ತ ಅವಕಾಶ ಕಲ್ಪನೆ ಮತ್ತು ಜಾನಪದ ವಿಶ್ವಕೋಶ ರಚನೆಗಾಗಿ ಸಂಶೋಧನಾ ಕೇಂದ್ರ ಸ್ಥಾಪನೆ ಆಗುವುದಿದೆ. ನಗರದ ವಿದ್ಯಾರ್ಥಿಗಳು ತಮ್ಮ ಗ್ರಾಮೀಣ ಸಂಸ್ಕೃತಿಯ ಪರಿಚಯ ಮಾಡಿಕೊಳ್ಳಲು ಮತ್ತು ನೃತ್ಯ-ನಾಟಕ ಇತ್ಯಾದಿಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವಂತೆ ಮಾಡಲು ಬೇಸಿಗೆ ಶಿಬಿರಗಳು ಪ್ರಾರಂಭವಾಗಲಿವೆ.

ಜನಪದ ರಂಗಕಲೆ ಮತ್ತು ನೃತ್ಯ ಕಲೆಗಳಲ್ಲಿ ಶಿಕ್ಷಣ ಮತ್ತು ಈಗಾಗಲೇ ಕಲಾಪ್ರದರ್ಶನ ಮಾಡುತ್ತಿರುವವರಿಗೆ ಸೂಕ್ತ ತರಬೇತಿ ನೀಡಲು ಕಲಾಶಿಕ್ಷಣ ಹಾಗೂ ತರಬೇತಿ ಕೇಂದ್ರ ಒಂದು ಆರಂಭ ಆಗಬೇಕಿದೆ.

ಪ್ರದರ್ಶನೀಯ ಕಲೆಗಳಿಗೆ ನಿಗದಿಯಾದ ವೇಷಭೂಷಣಗಳನ್ನು ಕಲಾವಿದರಿಗೆ ಒದಗಿಸುವ ಸಲುವಾಗಿ ವೇಷಭೂಷಣಗಳ ಭಂಡಾರ ಒಂದು ಸಿದ್ಧಗೊಳ್ಳಬೇಕಿದೆ.

ಕರಕುಶಲ ಕಲಾವಿದರು ಈ ಕೇಂದ್ರದಲ್ಲಿ ಇದ್ದುಕೊಂಡು ಗ್ರಾಮೀಣರ ಕರಕುಶಲ ವಸ್ತುಗಳನ್ನು ಮತ್ತು ಜನಪದ ಕಲಾವಿದರ ವೇಷಭೂಷಣಗಳು, ವಾದ್ಯಪರಿಕರಗಳು ಮುಂತಾದುವನ್ನು ತಯಾರಿಸುವುದಕ್ಕೂ ಮಾರಾಟ ಮಾಡುವುದಕ್ಕೂ ಅವಕಾಶ ಕಲ್ಪಿಸಲು ಕರಕುಶಲ ಮಳಿಗೆಗಳನ್ನು ಒದಗಿಸಬೇಕಿದೆ.

ಲೋಕದ ಸಂಗ್ರಹಾಲಯದಲ್ಲಿ ಈಗಾಗಲೇ ಇರುವ ಒಂದು ಸಾವಿರದ ಐದು ನೂರು ಗಂಟೆಗಳಷ್ಟು ಮೊತ್ತದ ಜಾನಪದಕ್ಕೆ ಸಂಬಂಧಿಸಿದ ಆಡಿಯೋ ಮತ್ತು ಸುಮಾರು ಮುನ್ನೂರು ಗಂಟೆಗಳು ವಿಡಿಯೋ ಇಲ್ಲಿನ ಅಮೂಲ್ಯ ಆಸ್ತಿಯಾಗಿದೆ.

೧೯೮೦ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಸರ್ಕಾರ ಸ್ಥಾಪಿಸಿತು. ನಾಗೇಗೌಡರ ಜಾನಪದ ಸೇವೆಯನ್ನು ಮನಗಂಡು ಇವರನ್ನು ಅದರ ಪ್ರಥಮ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಎರಡನೇ ಅವಧಿಗೂ ಅಧ್ಯಕ್ಷರಾಗಿ ಮುಂದುವರಿದ ನಾಗೇಗೌಡರು ತಮ್ಮ ಒಟ್ಟು ಆರು ವರ್ಷಗಳ ಅವಧಿಯಲ್ಲಿ ಕಲಾವಿದರ ಅಭ್ಯುದಯಕ್ಕೆ ಅಪಾರ ಕಾರ್ಯಗಳನ್ನು ಮಾಡಿದರು.

ಜಾನಪದ ಕೃತಿಗಳು

ಸೋಬಾನೆ ಚಿಕ್ಕಮ್ಮನ ಪದಗಳು :

ನಾಗೇಗೌಡರು ಸಂಗ್ರಹಿಸಿ ಪ್ರಕಟಿಸಿರುವ "ಸೋಬಾನೆ ಚಿಕ್ಕಮ್ಮನ ಪದಗಳು" ಕನ್ನಡ ಜನಪದ ಸಂಗ್ರಹಗಳಲ್ಲಿ ಅನೇಕ ದೃಷ್ಟಿಯಿಂದ ಅತ್ಯುತ್ತಮವಾದ ಗ್ರಂಥವಾಗಿದೆ. ಜನಪದ ಸಾಹಿತ್ಯ ಸಂಗ್ರಹ ಮಾತ್ರವಲ್ಲದೆ, ಹಾಡುಗಳಿಗೆ ಸ್ವರ ಪ್ರಸ್ತಾರ ಹಾಕಿಸಿ, ಅವುಗಳನ್ನು ಶಾಸ್ತ್ರೀಯವಾದ ಧಾಟಿಯಲ್ಲಿ (ಮೂಲಧಾಟಿ) ಕ್ರಮಪಡಿಸಿ, ಸಂಗೀತ ಬಲ್ಲವರು ಒಂದೇ ಕ್ರಮದಲ್ಲಿ ಹಾಡಲು ಅನುಕೂಲ ಕಲ್ಪಿಸಿರುವುದು ಇದುವರೆಗೂ ಯಾರು ಮಾಡದಿರುವ ಪ್ರಯತ್ನವಾಗಿದೆ.

ಈ ಗ್ರಂಥದಲ್ಲಿ ಒಬ್ಬರೇ ಹೇಳಿದ ಹಾಡುಗಳು ಪ್ರಕಟವಾಗಿದ್ದು, ಇಲ್ಲಿಯವರೆಗೆ ಪ್ರಕಟವಾದ ಬೇರೆ ಯಾವುದೇ ಸಂಗ್ರಹಕ್ಕಿಂತ, ಮದುವೆ ಹಾಡುಗಳ ಮಟ್ಟಿಗೆ ಇದೇ ಹೆಚ್ಚು ಸಮಗ್ರವಾದ ಸಂಗ್ರಹ ಎಂಬುದು ಒಪ್ಪುವಂಥ ವಿಷಯವಾಗಿದೆ. ಇದಲ್ಲದೆ ಚಿಕ್ಕಮ್ಮನ ಜೀವನ ಚರಿತ್ರೆಯನ್ನು ಅವಳ ಮಾತಿನಲ್ಲೇ ಹೇಳಿಸಿಕೊಟ್ಟಿರುವುದು ಸ್ವಾರಸ್ಯವಾಗಿದೆ.

ಒಕ್ಕಲಿಗರಲ್ಲಿನ ಮದುವೆಯ ಪದ್ಧತಿಯು ಹಾಡಿನೊಡನೆ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಇದನ್ನು ಪರಿಚಯಿಸಲು ವಿವರಣೆ ಕೊಟ್ಟಿರುವುದು ಸೂಕ್ತವೇ ಆಗಿದೆ. ಇದರ ಜೊತೆಗೆ ಮದುವೆಯ ದೃಶ್ಯಗಳ ಛಾಯಾಚಿತ್ರಗಳನ್ನು ಒದಗಿಸಿರುವುದು ಹೆಚ್ಚು ಸಮಗ್ರತೆಯನ್ನು ತಂದುಕೊಡುತ್ತದೆ. ಈ ಗ್ರಂಥದ ಮತ್ತೊಂದು ವಿಶೇಷವೆಂದರೆ ಮದುವೆಯ ಮತ್ತು ಇತರೆ ಹಾಡುಗಳಿಗೆ ಒದಗಿಸಿರುವ ಟಿಪ್ಪಣಿಗಳು ಬಹುಮಟ್ಟಿಗೆ ಸಮರ್ಪಕವಾಗಿದ್ದು ಹಾಡುಗಳ ಅರ್ಥ ತಿಳಿಯಲು ಸಂಬಂಧಿಸಿದ ಜನರ ಜೀವನ ಕ್ರಮ ಮತ್ತು ನಂಬಿಕೆಗಳನ್ನು ತಿಳಿಯಲು ತುಂಬ ಉಪಯುಕ್ತವಾಗಿದೆ. ಅದಲ್ಲದೆ ಪ್ರಾದೇಶಿಕ ನುಡಿಗಳು ಸಹ ಈ ಗೀತ ಸಂಕಲನದಿಂದ ಬೆಳಕಿಗೆ ಬಂದಿದೆ.

ಕರ್ನಾಟಕ ಜನಪದ ಕಥೆಗಳು :

ಇದು ಇವರ ಮೂರನೆಯ ಸಂಕಲನವಾಗಿದೆ. ಜನಪದ ಕಥೆಗಳ ಸಂಗ್ರಹವಾದ ಈ ಕೃತಿಯು ಕಥೆಗಳ ವೈವಿಧ್ಯ ಮತ್ತು ವ್ಯಾಪ್ತಿಯನ್ನು ಸಮರ್ಥವಾಗಿ ಪರಿಚಯಿಸುತ್ತದೆ. ಸಮಗ್ರ ಕರ್ನಾಟಕದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಈ ಸಂಗ್ರಹ

ಮಹತ್ವದ್ದಾಗಿದೆ. ಆದರೆ ಇಲ್ಲಿ ಸಂಗ್ರಹಿಸಿದ ಕಥೆಗಳನ್ನು ಕಥಾವಸ್ತು ಮತ್ತು ತಂತ್ರ ಆಧರಿಸಿ ಅವುಗಳ ವಿಭಜನೆ ಮಾಡುವ ಪ್ರಯತ್ನ ಮಾಡಿಲ್ಲ.

ಕನ್ನಡ ಜನಪದ ಕಥೆಗಳ ಕೆಲವು ಉತ್ತಮ ಮಾದರಿಗಳಷ್ಟೇ ಅಲ್ಲದೆ ವಿಶ್ವಜಾನಪದ ಕಥೆಗಳ ವರ್ಗೀಕರಣದ ಎಲ್ಲ ಭಾಗಗಳಿಗೂ ಈ ಸಂಕಲನದ ಕಥೆಗಳಲ್ಲಿ ಸಾಕಷ್ಟು ಉತ್ತಮ ಭಿನ್ನರೂಪಗಳು ಲಭ್ಯವಾಗುತ್ತವೆ. ಕಥೆಗಳ ಸಾಂಸ್ಕೃತಿಕ ಪರಿಸರದ ದೃಷ್ಟಿಯಿಂದ, ಭಾಷಾ ವೈವಿಧ್ಯದ ದೃಷ್ಟಿಯಿಂದ ಸಮಗ್ರ ಕರ್ನಾಟಕದ ವ್ಯಾಪ್ತಿಯುಳ್ಳ ಸಂಗ್ರಹ ಕೃತಿ ಕನ್ನಡ ಜನಪದ ಕಥೆಗಳ ಒಂದು ಗಮನಾರ್ಹ ಸಂಕಲನವಾಗಿ ನಿಲ್ಲುತ್ತದೆ.

ಪದವವೆ ನಮ್ಮ ಎದೆಯಲ್ಲಿ

"ಪದವವೆ ನಮ್ಮ ಎದೆಯಲ್ಲಿ" ಎಂಬ ಸಂಕಲನದಲ್ಲಿ ಹನ್ನೊಂದು ದಳಗಳಿದ್ದು ಒಂದೊಂದು ದಳದಲ್ಲಿ ಒಂದೊಂದು ಪ್ರಕಾರಕ್ಕೆ ಸಂಬಂಧಿಸಿದ ಹಾಡುಗಳಿವೆ. ಐದುನೂರ ಇಪ್ಪತ್ತನಾಲ್ಕು ಪುಟಗಳಿರುವ ಈ ಸಂಕಲನದಲ್ಲಿ ಕ್ರಮವಾಗಿ ಸೋಬಾನೆ ಪದಗಳು, ಒಸಗೆ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು, ಕೋಲಾಟದ ಪದಗಳು, ಲಾಲಿ ಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು, ಹಾಡ್ಗತೆಗಳು, ಹೊಲೆಯರು ಹೊಗಳುವ ಪದಗಳು ಮತ್ತು ಪದವವೆ ನಮ್ಮ ಎದೆಯಲ್ಲಿ ಎಂಬ ಭಾಗಗಳಿದ್ದು ಪುಸ್ತಕದ ಶೀರ್ಷಿಕೆಯನ್ನು ಏಳನೇ ದಳದಿಂದ ಆರಿಸಲಾಗಿದೆ.

ಈ ಸಂಕಲನದಲ್ಲಿರುವ ಸಾಹಿತ್ಯವನ್ನು ಗಂಡಸರು, ಹೆಂಗಸರು ಮಕ್ಕಳಿಂದ ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ಕಾಲದಲ್ಲಿ ಸಂಗ್ರಹಿಸಿದ್ದಾರೆ. ವಕ್ತೃಗಳು ವಿಭಿನ್ನ ಸಂಸ್ಕೃತಿಯವರಾಗಿದ್ದು, ಅವರ ವಯೋಮಿತಿಯಲ್ಲಿಯೂ ಸಾಕಷ್ಟು ಅಂತರ ಗಳಿರುವುದರಿಂದ ಅವರು ಹಾಡಿರುವ ಸಾಹಿತ್ಯದಲ್ಲಿಯೂ ಅದರ ಪರಿಣಾಮ ಉಂಟಾಗಿದೆ.

ಈ ಕೃತಿಯು ಒಂದು ಮಹತ್ವಪೂರ್ಣ ಸಂಕಲನ. ಸಂಶೋಧಕರ ಕುತೂಹಲವನ್ನು ಕೆರಳಿಸುವ, ಸಾಹಿತ್ಯ ಸ್ವಾರಸ್ಯದಿಂದ ಕೂಡಿದ ಅನೇಕ ಬಗೆಯ ಗೀತೆಗಳು, ಬಿಡಿ ಹಾಡುಗಳು, ತ್ರಿಪದಿಗಳು ದೊರೆಯುತ್ತವೆ. ಈವರೆಗೆ ಇಷ್ಟು ವ್ಯಾಪಕವಾದ ವಸ್ತು ವೈವಿಧ್ಯದಿಂದ ಕೂಡಿರುವ ಸಂಕಲನ ಪ್ರಕಟವಾಗಿರಲಿಲ್ಲ ಎಂದು ಹೇಳಿದರೂ ತಪ್ಪಾಗಲಾರದು. ಗಾತ್ರದಲ್ಲಿಯೂ, ಗುಣದಲ್ಲಿಯೂ ಅತ್ಯಂತ ಶ್ರೇಷ್ಠವಾಗಿರುವ ಈ ಸಂಕಲನದಿಂದ ಜನಪದ ಸಾಹಿತ್ಯ ಪ್ರೇಮಿಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಕೆಲವು ಜನಪದ ಗೀತೆಗಳು ಅಪೂರ್ಣವಾಗಿದ್ದರೂ ಮುಂದಿನವರು ಕೈಗೊಳ್ಳುವ ಸಂಗ್ರಹಕಾರ್ಯಕ್ಕೆ ಕೈಮರವಾಗುತ್ತದೆ. ಆದ್ದರಿಂದ ಅವುಗಳನ್ನೂ ಸೇರಿಸಿರುವುದು ಉಚಿತವಾಗಿದೆ.

ಹೆಳವರು ಮತ್ತು ಅವರ ಕಾವ್ಯಗಳು (೧೯೮೨)

"ಹೆಳವರು ಮತ್ತು ಅವರ ಕಾವ್ಯಗಳು" ಎಂಬ ಕೃತಿಯು ನಾಗೇಗೌಡರ ಸುಮಾರು ಹದಿನೈದು ವರ್ಷಗಳ ಸಂಶೋಧನೆಯ ಫಲವಾಗಿ ರೂಪುಗೊಂಡುದಾಗಿದೆ. ಅರವತ್ತ ಮೂರು ಪುಟಗಳಷ್ಟು ಸುದೀರ್ಘ ಪ್ರಸ್ತಾವನೆಯೊಂದಿಗೆ ಮುನ್ನೂರ ಎಪ್ಪತ್ತೆಂಟು

ಪುಟಗಳಲ್ಲಿ ಹೆಳವರು ಮತ್ತು ಅವರ ಕುಲಗಳ ಮೂಲ ಹಾಗೂ ಅವರು ಹಾಡುವ ಕಾವ್ಯಗಳನ್ನು ವಿಸ್ತಾರವಾಗಿ ಹೇಳಿದ್ದಾರೆ. ಇದಲ್ಲದೆ ಅನುಬಂಧದಲ್ಲಿ ಹೆಳವರ ಬಗ್ಗೆ ಇರುವ ಪುರಾಣ, ಕಥೆ, ಶಾಸನವನ್ನು ಸಂಪಾದಿಸಿ ಕೊಟ್ಟಿದ್ದಾರೆ.

ಈ ಕೃತಿಯ ರಚನೆಗೆ ಕೇವಲ ಹೆಳವರಿಂದ ಪ್ರಾಥಮಿಕ ಮಾಹಿತಿ ಸಂಗ್ರಹ ಮಾತ್ರವಲ್ಲದೆ ಅನೇಕ ಜಾನಪದ ವಿದ್ವಾಂಸರ ಜೊತೆಯಲ್ಲಿ ಚರ್ಚಿಸಿದ್ದಾರೆ. ಹಾಗೂ ಈ ಬಗ್ಗೆ ಲಭ್ಯವಿರುವ ಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿದ್ದಾರೆ.

ನಾಗೇಗೌಡರು ಮಾಡಿದ ಯಾವುದೇ ಕೆಲಸವು ಸಮಗ್ರ ಮತ್ತು ಸಂಪೂರ್ಣವಾಗಿರಬೇಕು ಎಂಬ ಉದ್ದೇಶದಿಂದಲೇ ಈ ಕೃತಿಯನ್ನು ಸುಮಾರು ಹದಿನೈದು ವರ್ಷಗಳ ಕಾಲ ಹೆಚ್ಚಿನ ಮಾಹಿತಿ ಸಂಗ್ರಹದೊಂದಿಗೆ ವಿದ್ವಾಂಸರ ಕೂಡ ಚರ್ಚಿಸಿ ಸಂಶೋಧಿಸಿ ಕೊಟ್ಟಿದ್ದಾರೆ. ಹೆಳವರನ್ನು ಕುರಿತ ಹೆಚ್ಚಿನ ಅಧ್ಯಯನಕ್ಕೆ ಈ ಕೃತಿ ಆಕರ ಗ್ರಂಥವಾಗುತ್ತದೆ.

ಅನುಬಂಧ

ಎಚ್.ಎಲ್. ನಾಗೇಗೌಡರ ಕೃತಿಗಳು

ಅನುವಾದಿತ ಕೃತಿಗಳು

೧. ಕೆನಿಲ್‌ವರ್ತ್ - ೧೯೫೪
೨. ಮಾರ್ಕೊಪೋಲೋ ಪ್ರವಾಸ ಕಥನ - ೧೯೫೬
೩. ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ - ೧೯೬೭
೪. ಪ್ರವಾಸ ಕಂಡ ಇಂಡಿಯಾ-ಸಂಪುಟ:ಒಂದು - ೧೯೬೪
೫. ಪ್ರವಾಸಿ ಕಂಡ ಇಂಡಿಯಾ-ಸಂಪುಟ:ಎರಡು - ೧೯೬೬
೬. ಪ್ರವಾಸಿ ಕಂಡ ಇಂಡಿಯಾ-ಸಂಪುಟ:ಮೂರು - ೧೯೬೯
೭. ಪ್ರವಾಸಿ ಕಂಡ ಇಂಡಿಯಾ-ಸಂಪುಟ:ನಾಲ್ಕು - ೧೯೭೨
೮. ಪ್ರವಾಸಿ ಕಂಡ ಇಂಡಿಯಾ-ಸಂಪುಟ:ಐದು - ೧೯೭೫
೯. ಪ್ರವಾಸಿ ಕಂಡ ಇಂಡಿಯಾ-ಸಂಪುಟ:ಆರು - ೧೯೭೭
೧೦. ಪ್ರವಾಸಿ ಕಂಡ ಇಂಡಿಯಾ-ಸಂಪುಟ:ಏಳು - ೧೯೮೩

ಕಾದಂಬರಿಗಳು

೧೧. ದೊಡ್ಡಮನೆ - ೧೯೭೨
೧೨. ಸೊನ್ನೆಯಿಂದ ಸೊನ್ನೆಗೆ - ೧೯೭೫
೧೩. ಭೂಮಿಗೆ ಬಂದ ಗಂಧರ್ವ - ೧೯೭೭

ಕವನ ಸಂಕಲನ

೧೪. ನಾನಾಗುವೆ ಗೀಜಗನ ಹಕ್ಕಿ - ೧೯೬೫
೧೫. ಕಥೆ-ವ್ಯಥೆ - ೧೯೭೧

ಕಥಾ ಸಂಕಲನ

೧೬. ಕಂಡ ಕೇಳಿದ ಕಥೆಗಳು - ೧೯೭೯

ಜಾನಪದ ಸಂಗ್ರಹ ಕೃತಿಗಳು

೧೭. ಸೋಬಾನೆ ಚಿಕ್ಕಮ್ಮನ ಹಾಡುಗಳು - ೧೯೭೧
೧೮. ಕರ್ನಾಟಕ ಜನಪದ ಕಥೆಗಳು - ೧೯೭೨

ಜಾನಪದ ಸಂಪಾದಿತ ಕೃತಿಗಳು :

ಸಂಕೀರ್ಣ ಬರಹಗಳು :

ಪ್ರಶಸ್ತಿಗಳು

೧೯೭೪ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೮೮ - ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ

೧೯೯೦ - ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ

೧೯೯೨ - ಕರ್ನಾಟಕ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಪ್ರಶಸ್ತಿ

ಪ್ರಶಸ್ತಿ ಪಡೆದ ಗ್ರಂಥಗಳು

೧೯೬೫ - ನನ್ನೂರು (ಹಳ್ಳಿಯ ಚಿತ್ರಣ)

೧೯೬೬ - ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ (ಅನುವಾದ)

೧೯೭೨ - ಸೋಬಾನೆ ಚಿಕ್ಕಮ್ಮನ ಪದಗಳು (ಜನಪದ ಸಾಹಿತ್ಯ)

೧೯೭೬ - ಪದವವೆ ನಮ್ಮ ಎದೆಯಲ್ಲಿ (ಜನಪದ ಸಾಹಿತ್ಯ)

೧೯೮೦ - ನಾ ಕಂಡ ಪ್ರಪಂಚ (ಪ್ರವಾಸ ಸಾಹಿತ್ಯ)

ಹೆಚ್ಚಿನ ಓದಿಗಾಗಿ

೧.	ನಾಗವಲ್ಲಿ	ಅಭಿನಂದನ ಗ್ರಂಥ		- ೧೯೭೯
೨.	ನಾಗಸಿರಿ	ಸಂಪುಟ ೧	ಜೀವನ ಯಾತ್ರೆ	
೩.	ನಾಗಸಿರಿ	ಸಂಪುಟ ೨	ವಿದೇಶ ಯಾತ್ರೆ	
೪.	ನಾಗಸಿರಿ	ಸಂಪುಟ ೩	ಚುನಾವಣಾ ಯಾತ್ರೆ	
೫.	ನಾಗಸಿರಿ	ಸಂಪುಟ ೪	ಜಾನಪದ ಯಾತ್ರೆ	

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು